
# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

Nesaru **Tingalole** Vol XXIV - 1 ಜನವರಿ 2006

# ಡಿವಿಜಿ ಸಂಸ್ಮರಣೆ ವಿಶೇಷಾ ಸಂಚಿಕೆ



Rs. 5/-

**The Mysore Association, Bombay**
393, Bhaudaji Road, Matunga, Mumbai - 400 019.
Phone : 2402 4647, 2403 7065 • Fax : 2401 0574
E-mail : karunadu@bom5.vsnl.net.in

# ಬಾಳಿಗೊಂದು ನಂಬಿಕೆ : ಬದುಕು ಏಕೆ?

- ಡಿವಿಜಿ

ನಾವು ಬದುಕುವುದು ಏತಕ್ಕೋಸ್ಕರ ? ಸಾಯಲಾರದಕ್ಕೋಸ್ಕರವೇ? ಅಥವಾ ಬೇರೆ - ಯಾವುದಾದರೂ ಉದ್ದೇಶವುಂಟೋ ? ಕನಕದಾಸರು ಹೀಗೆ ಹೇಳಿದ್ದಾರೆ:

ಎಲ್ಲಾರು ಮಾಡುವ ಕೆಲಸ - ಹೊಟ್ಟೆಗಾಗಿ ।
ಗೇಣು ಬಟ್ಟೆಗಾಗಿ - ಮುದ್ದೆ ಹಿಟ್ಟಿಗಾಗಿ ॥ ಪಲ್ಲವಿ ॥
ಕೊಟ್ಟಣವ ಕುಟ್ಟಿಕೊಂಡು ಕಟ್ಟಿಗೆಯ ಹೊತ್ತುಕೊಂಡು।
ಕಷ್ಟಪಾದು ಪಡುವುದು ಏತಕಾಗಿ?।
ಹೊಟ್ಟೆಗಾಗಿ - ಗೇಣು ಬಟ್ಟೆಗಾಗಿ ॥
ಬೆಲ್ಲದಂತೆ ಮಾತನಾಡಿ -
ಎಲ್ಲರನ್ನು ಮರುಳು ಮಾಡಿ ।
ಸುಳ್ಳು ಬೊಗಳಿ ಬಾಳುವುದು - ಏತಕಾಗಿ?।
ಹೊಟ್ಟೆಗಾಗಿ - ಗೇಣು ಬಟ್ಟೆಗಾಗಿ ॥
ಸಂನ್ಯಾಸಿ ಜಂಗಮ ಜೋಗಿ - ಜಟ್ಟಿ ಮೊಂಡ ಬೈರಾಗಿ
ನಾನಾ ವೇಷಗಳೆಲ್ಲ - ಏತಕಾಗಿ?।
ಹೊಟ್ಟೆಗಾಗಿ - ಗೇಣು ಬಟ್ಟೆಗಾಗಿ ॥
ಇಷ್ಟೇನೆ ಜೀವನದ ಮರ್ಮ ?

ನಮ್ಮ ಮನೆಯಲ್ಲಿರುವ ದನ, ಕಾವಲು ನಾಯಿ, ಬಿಲದ ಇಲಿ, ಉಗ್ರಾಣದ ಬೆಕ್ಕು, ಮುದ್ದಿನ ಗಿಣಿ ಇವೆಲ್ಲ ಪಡುವ ಪಾಡೂ ಅಷ್ಟೇ ಅಲ್ಲವೇ ? ಹೊಟ್ಟೆಗಾಗಿ - ಇಷ್ಟು ರೊಟ್ಟಿಗಾಗಿ ॥

ಕಾಡಿನ ಹುಲಿ ಸಿಂಹಗಳೂ, ಹುತ್ತದಲ್ಲಿಯ ಹಾವು ಚೇಳುಗಳೂ, ಆಕಾಶದ ಹಕ್ಕಿ ಹದ್ದುಗಳೂ, ಕೊಳಕಿನ ನೊಣ ಸೊಳ್ಳೆಗಳೂ - ಎಲ್ಲ ಜಂತುಗಳೂ ಬದುಕು ಮಾಡುವುದು -

ಹೊಟ್ಟೆಗಾಗಿ - ಗೂಡುಗಟ್ಟಿಗಾಗಿ ।
ಸವಿ ತುತ್ತಿಗಾಗಿ - ಹಾಸು ಮೆತ್ತೆಗಾಗಿ

ಊಟನಿದ್ದೆಗಳ ಚಿಂತೆ, ಸಂಗಾತಿಗಾಗಿ ಚಿಂತೆ, ಪ್ರಾಣ ಭಯವನ್ನು ತಪ್ಪಿಸಿಕೊಳ್ಳುವ -ಚಿಂತೆ ಇವು ಎಲ್ಲ ಪ್ರಾಣಿಗಳಿಗೂ ಉಂಟಾದುವೇ. ಅಂಥ ಚಿಂತೆಗಳು ಸ್ವಭಾವದಿಂದಲೇ ಉಂಟಾಗತಕ್ಕವು. ಮನುಷ್ಯನ ಪಾಡು ಅಷ್ಟು ಮಾತ್ರವೇಯೋ, ಅಥವಾ ಅವನು ಪಶುಪಕ್ಷಿ ಕ್ರಿಮಿಕೀಟಗಳಿಗಿಂತ ಯಾವ ವಿಷಯದಲ್ಲಾದರೂ ಹೆಚ್ಚಾದವನೋ? ಅವನ ಪಾಲಿಗೆ ಅನ್ನವಸತಿಗಳಿಗಿಂತ ಮೇಲಾದ ಗುರಿಯೇನಾದರೂ ಉಂಟೋ?

ನಮ್ಮ ಸುತ್ತಮುತ್ತಲಿರುವ ಜನವನ್ನು ನೋಡಿದರೆ ಅವರಲ್ಲಿ ನೂರರ ಪೈಕಿ ಐವತ್ತು ಮಂದಿಗೆ ಇಂಥ ಪ್ರಶ್ನೆ ಮನಸ್ಸಿಗೆ ಬಂದಿರುವ ಹಾಗೆಯೇ ತೋರುವುದಿಲ್ಲ. ಅವರು ಇರುವೆಯಂತೆಯೋ ಕತ್ತೆಯಂತೆಯೋ ತಿಗಣೆಯಂತೆಯೋ ಆನೆಯಂತೆಯೋ ಅನುಗಾಲವೂ ದುಡಿದು ದುಡಿದು, ತಮ್ಮ ತಮ್ಮ ಬಾಳುವೆ ನಡೆಸಿಕೊಂಡು, ಸದ್ದಿಲ್ಲದೆ ಸಾಗಿ, ಕಡೆಗೆ ಮಣ್ಣು ಸೇರುತ್ತಾರೆ. ಅದೇ ಸರಿಯೆ? ಆ ಹೊತ್ತಿನ ಊಟ, ಆ ರಾತ್ರಿಯ ನಿದ್ದೆ, ಅಂದಂದಿನ ಚಾಕರಿ, ಅಂದಂದಿನ ಪೇಚಾಟ, ಮಾರನೆಯ ದಿನ ಬಂದಾಗ ಅದರ ಯೋಚನೆ -ಹೀಗಿರುವುದೇ ಸರಿಯೆ? ಅಥವಾ ಹೊಟ್ಟೆಯ ಪಾಡಿನ ಯೋಚನೆಗಿಂತ ಮೇಲ್ಪಟ್ಟ ವಿಚಾರವೇನಾದರೂ ಮನುಷ್ಯನ ಪಾಲಿಗೆ ಉಂಟೋ?


**ದೊಡ್ಡ ಗುರಿ:** ಉಂಟೆನ್ನುತ್ತಾರೆ ದಾಸರು:

ಉನ್ನತದ ನೆಲೆಯಾದಿ - ಕೇಶವನ ಧ್ಯಾನವನ್ನು
ಮನಮುಟ್ಟಿ ಮಾಡುವುದು - ಮುಕ್ತಿಗಾಗಿ ॥
ಭಕ್ತಿಗಾಗಿ ಜೀವ ತೃಪ್ತಿಗಾಗಿ ।
ಆತ್ಮಶಕ್ತಿಗಾಗಿ ಆನಂದಕಾಗಿ ॥

ಈ ಉದ್ದೇಶಗಳು ಹೊಟ್ಟೆಬಟ್ಟೆಗಳ ಚಿಂತೆಗಿಂತ ಬೇರೆಯಾದವು; ಆದರೂ ಆ ಚಿಂತೆಗೆ ಜೊತೆಗೂಡಿ ಇರಬೇಕಾದವು. ದೈವ, ಆತ್ಮ, ಭಕ್ತಿ, ಆನಂದ -ಇವು ಮನುಷ್ಯನಿಗೆ ಮಾತ್ರ ಸೇರಿರುವ ವಿಚಾರಗಳು; ಇತರ ಪ್ರಾಣಿಗಳಿಗೆ ಅವು ಇಲ್ಲ. ಮನುಷ್ಯನ ಮನುಷ್ಯತ್ವ ಆ ಉನ್ನತವಾದ ಉದ್ದೇಶಗಳಿಂದ.

ಕನಕದಾಸರು ಅದೃಷ್ಟವಂತರು. ಅವರ ಹೊಟ್ಟೆ ಚಿಕ್ಕದಾಗಿತ್ತು. ಬೇಸಾಯವೋ ಬೇಟೆಯೋ ಆ ಸಣ್ಣ ಹೊಟ್ಟೆಯನ್ನು ಸುಲಭವಾಗಿ ತುಂಬುತ್ತಿತ್ತು. ಅವರು ಸಂಗೀತ ಸಾಹಿತ್ಯಗಳನ್ನು ಕಲಿತಿದ್ದವರು : ಕೇಶವನನ್ನು ಕಂಡು ಕೊಂಡಿದ್ದವರು. ಆದದ್ದರಿಂದ ಅವರು ಹಾಡಿಕೊಂಡು ದೈವಭಜನೆಯಿಂದ ಆನಂದ ಪಡಬಹುದಾಗಿತ್ತು. ನಮ್ಮ ಪಾಡು ಹಾಗಾದೀತೋ? ಅವರಿಗೆ ಕೇಶವನಲ್ಲಿ ನಂಬಿಕೆ ಇದ್ದಂತೆ ನಮಗೆ ಯಾವುದರಲ್ಲಾದರೂ ನಂಬಿಕೆ ಉಂಟೋ ? ಅವರಿಗೆ ಧ್ಯಾನಾನಂದ ಗುರಿಯಾಗಿದ್ದಂತೆ ನಮಗೆ ಗುರಿಯೇನಾದರೂ ಉಂಟೋ? ಗುರಿ ಎಂದರೆ ಬಾಳ್ವೆಯದರ ಒಂದು ರೂಪ.

> *ನದಿ ಅಗಲವಾದಷ್ಟೂ ಅದನ್ನು ದಾಟುವ ಸೇತುವೆಗೆ ಕಮಾನುಗಳು ಹೆಚ್ಚಾಗಿರಬೇಕು. ನಮ್ಮ ಜೀವನ ಒಂದು ಮಹಾಪ್ರಸಂಗವಾದದ್ದರಿಂದ ಅದರ ಕಷ್ಟ ಪ್ರಶ್ನೆಗಳನ್ನು ಪೂರೈಸಲು ನಮ್ಮ ಮನಸ್ಸೂ ಬುದ್ಧಿಯೂ ಅನೇಕ ಭಾವ ಭಂಗಿಗಳಲ್ಲಿ ನಿಲ್ಲುವುದನ್ನು ಕಲಿಯಬೇಕು. ನಮ್ಮ ಬಾಳು ನಿತ್ಯದ ಕುಸ್ತಿ. ಅದಕ್ಕೆ ನಾವು ಹತ್ತೆಂಟು ಕೈಪಟ್ಟು ಕಾಲುವರಸೆಗಳನ್ನು ಅಭ್ಯಾಸ ಮಾಡಿಕೊಂಡಿರಬೇಕು. ಒಂದು ಕಾಲು ನಮ್ಮ ನಡಿಗೆಗೆ ಸಾಲದು; ಒಂದು ಕೈ ನಮ್ಮ ಕೆಲಸಕ್ಕೆ ಸಾಲದು. ಹಾಗೆಯೇ ಏಕವಾಕ್ಯ ಸಿದ್ಧಾಂತ ನಮ್ಮ ಬಾಳಿಗೆ ಸಾಲಲಾರದು.*



**ಅವನವನ ಗುರಿ ಅವನವನಿಗೆ:** ಪ್ರಪಂಚದಲ್ಲಿ ಲಕ್ಷ ಕೋಟಿಗಟ್ಟಲೆ ಮನುಷ್ಯರಿದ್ದಾರಲ್ಲವೇ? ಅವರಲ್ಲಿ ಒಬ್ಬನಂತೆ ಇನ್ನೊಬ್ಬನಿಲ್ಲ. ಇದು ಹೊರನೋಟಕ್ಕೆ ಮಾತ್ರವೇ ಅಲ್ಲ, ಒಳಗುಣದಲ್ಲಿಯೂ ಹಾಗೆಯೇ. ದೇಹದ ಅಂಗಾಂಗಗಳ ಎಲ್ಲರಿಗೂ ಒಂದೇ ಸಮವೆಂದು ತೋರಿದರೂ, ಅಂಗದ ಆಕಾರ ರೇಖೆಯಲ್ಲಿ ಒಬ್ಬನಿಗೂ ಇನ್ನೊಬ್ಬನಿಗೂ ಭೇದವಿರುತ್ತದೆ. ಆದದ್ದರಿಂದಲೇ ನಾವು ಒಬ್ಬ ವ್ಯಕ್ತಿಯನ್ನು

ಕಂಡೊಡನೆಯೆ ಅವನು ಇಂಥವನೆಂದು ಗುರುತು ಕಾಣಲು ಆಗುತ್ತದೆ. ಮನುಷ್ಯ ಕಣ್ಣೆದುರಿಗಿಲ್ಲದಿದ್ದರೂ ಅವನ ಧ್ವನಿಯಿಂದಲೇ ಗುರುತು ಹಿಡಿಯುತ್ತೇವೆ. ದೂರದಿಂದ ಕಾಣಿಸಿದ ನಡಿಗೆಯಿಂದಲೇ ಇಂಥವನೆಂದು ಊಹಿಸುತ್ತೇವೆ. ಇಂಥಾ ತಿಳಿವಳಿಕೆಗೆ ಸಹಾಯವಾದದ್ದು ಜನರ ಲಕ್ಷಣ ವ್ಯತ್ಯಾಸ. ಇಂಥ ವ್ಯಕ್ತಿಭೇದಗಳು ಆಕಾರದಲ್ಲಿ ಮಾತ್ರವೇ ಅಲ್ಲ, ಶಕ್ತಿಸಾಮರ್ಥ್ಯ ಗಳಲ್ಲೂ ಇರುತ್ತವೆ. ಒಬ್ಬನ ಕಣ್ಣು ಚುರುಕು; ಇನ್ನೊಬ್ಬನದು ಮಂದ. ಒಬ್ಬನ ಕಿವಿ ನವಿರು; ಮತ್ತೊಬ್ಬನ ನಾಲಗೆ ವೇಗ. ಈ ಶಕ್ತಿಭೇದಗಳ ಜೊತೆಗೆ ಗುಣಭೇದಗಳೂ ಇರುತ್ತವೆ. ಒಬ್ಬನು ಕೋಪಿಷ್ಠ; ಇನ್ನೊಬ್ಬನು ತಾಳ್ಮೆವಂತ; ಒಬ್ಬನದು ಕಟ್ಟುನಿಟ್ಟು; ಇನ್ನೊಬ್ಬನದು ಸ್ನೇಹ ಸಲುಗೆ; ಒಬ್ಬನಿಗೆ ಖಾರ ಇಷ್ಟ, ಇನ್ನೊಬ್ಬನಿಗೆ ಸಿಹಿ ಇಷ್ಟ. ಇವೆಲ್ಲ ದೇಹದೊಳಗಣ ಮತ್ತು ಮನಸ್ಸಿನೊಳಗಣ ಗುಣಭೇದಗಳು. ಹಾಗೆಯೇ ಸಂದರ್ಭಗಳೂ ಒಬ್ಬೊಬ್ಬ ಮನುಷ್ಯನದು ಒಂದೊಂದು ರೀತಿಯಿರುತ್ತವೆ. ಒಬ್ಬನದು ದೊಡ್ಡ ಕುಟುಂಬ; ಒಬ್ಬನದು ಸಣ್ಣದು. ಒಬ್ಬನಿಗೆ ಪಿತ್ರಾರ್ಜಿತ ಚೆನ್ನಾಗಿರುತ್ತದೆ; ಇನ್ನೊಬ್ಬನು ಕಡುಬಡವ. ಒಬ್ಬನ ಮನೆಯ ಜನರು ದೃಢಕಾಯರು, ಇನ್ನೊಬ್ಬನವರು ರೋಗಿಷ್ಠರು.

ಹೀಗೆ ರೂಪರೇಖೆಗಳಲ್ಲೂ ಗುಣಶಕ್ತಿಗಳಲ್ಲೂ ಸಂದರ್ಭ ಸಮಾಚಾರಗಳಲ್ಲೂ ಮನುಷ್ಯ ಮನುಷ್ಯರಿಗೆ ಕೊಂಚಮಟ್ಟಿಗೆ ಹೋಲಿಕೆಯಿರುವುದರ ಜೊತೆಗೆ ಅಷ್ಟಿಷ್ಟು ವ್ಯತ್ಯಾಸವೂ ಇರುತ್ತದೆ. ಆದ್ದರಿಂದ ಪ್ರತಿಯೊಬ್ಬನೂ ತನ್ನ ಬಾಳು ಹೇಗೆ ನಡೆಯಬೇಕೆಂಬುದನ್ನು ಬಹುಮಟ್ಟಿಗೆ ತಾನೇ ಗೊತ್ತು ಮಾಡಿಕೊಳ್ಳಬೇಕಾಗಿದೆ. ಒಂದೇ ಗುರಿ, ಒಂದೇ ದಾರಿ, ಎಲ್ಲರಿಗೂ ಆಗಲಾರದು. ಕನಕದಾಸನಿಗೆ ಬಂದಿದ್ದ ನಂಬಿಕೆ ಕಬ್ಬಿಣದ ದಾಸನಿಗೆ ಬಾರದೆ ಹೋಗಬಹುದು. ಕನಕನಾಯಕನು ಕಂಡ ಗುರಿ ಕಲ್ಲು ನಾಯಕನ ಕಣ್ಣಿಗೆ ಕಾಣಬಾರದೆ ಇರಬಹುದು. ತನ್ನ ಕಣ್ಣಿನಂತೆ ತನ್ನ ಗುರಿ, ತನ್ನ ಕಾಲಿನಂತೆ ತನ್ನ ದಾರಿ;

ತನಗೆ ತಕ್ಕದ್ದೇನೆಂಬುದನ್ನು ಪ್ರತಿಯೊಬ್ಬನೂ ತನ್ನಷ್ಟಕ್ಕೆ ತಾನು ತಿಳಿದುಕೊಳ್ಳಬೇಕೆಂದರೆ, ಅವನಿಗೆ ಲೋಕರೂಢಿಯಿಂದಲೂ ಗುರುವಿನಿಂದಲೂ ಗ್ರಂಥದಿಂದಲೂ ಆ ತಿಳಿವಳಿಕೆ ಬರಲಾರದೆ?. ಎಂದು ಕೇಳಬಹುದು. ಅದಕ್ಕೆ ಉತ್ತರ ಹೀಗೆ: ಲೋಕದ ರೂಢಿಯೂ ಗುರುವೂ ಗ್ರಂಥವೂ ಅಂಗಡಿಯ ಹಾಗೆ. ಜವಳಿ ಅಂಗಡಿಯಲ್ಲಿ ನೂರು ತರದ ಬಟ್ಟೆಯಿರುತ್ತದೆ: ಹತ್ತಿಯದು, ರೇಷ್ಮೆಯದು, ತುಪ್ಪಟದ್ದು, ಬಿಳಿಯದು, ಬಣ್ಣದ್ದು. ಮೊದಲಾಗಿ. ನಾವು ನಮ್ಮ ಜೇಬನ್ನೂ ಹವಾಮಾನವನ್ನೂ ಕಣ್ಣಿನ ಇಂಪನ್ನೂ ನೋಡಿಕೊಂಡು, ಆ ಬಟ್ಟೆಗಳ ರಾಶಿಯಿಂದ ಒಂದೆರಡು ತುಂಡನ್ನು ಆರಿಸಿಕೊಳ್ಳುತ್ತೇವೆ. ಪಲಸರಕು ಮಳಿಗೆಯಲ್ಲಿ ಅಕ್ಕಿ, ರವೆ, ಬೆಲ್ಲ, ಸಕ್ಕರೆ, ತೊಗರಿ, ಅವರೆ- ಹೀಗೆ ನೂರು ಸಾಮಾನಿರುತ್ತದೆ. ನಾವು ಮನೆಯ ಜನಸಂಖ್ಯೆ, ನಮ್ಮ ಥೈಲಿಯ ಭಾರ, ನಮ್ಮ ನಾಲಗೆಯೊಪ್ಪಿತ - ಇದನ್ನೆಲ್ಲ ಆಲೋಚಿಸಿಕೊಂಡು ವ್ಯಾಪಾರ ಮಾಡುತ್ತೇವೆ. ಹಾಗೆಯೇ ನಮ್ಮ ಸ್ವಭಾವ, ನಮ್ಮ ಸಂದರ್ಭ ಇವೆರಡನ್ನೂ ನಾವು ಕಂಡುಕೊಂಡು ನಮಗೆ ತಕ್ಕ ಗುರಿ ಯಾವುದು, ತಕ್ಕ ದಾರಿ ಯಾವುದು ಎಂಬುದನ್ನು ನಾವೇ ಗೊತ್ತು ಮಾಡಿಕೊಳ್ಳಬೇಕು. ಲೋಕರೂಢಿಯೂ ಗ್ರಂಥವೂ ಗುರೂಪದೇಶವೂ ಕಚ್ಚಾ ಸಾಮಗ್ರಿ, ಅಷ್ಟೇ! ದಾರಿ ನಡೆಯುವವನಿಗೆ ಕೈಮರ ಹೇಗೋ ಹಾಗೆ ಅವು ನಮಗೆ ಸಹಾಯ ಮಾಡುತ್ತವೆ. ಆದರೆ ನೋಡುವ ಕಣ್ಣೂ ನಡೆಯುವ ಕಾಲೂ ನಮ್ಮವು ತಾನೇ?

ಗುರಿ ಎಂಬುದು ಕ್ರಮಕ್ರಮವಾಗಿ ಬೆಳೆಯುತ್ತದೆ. ನಾವು ಮನೆಯಲ್ಲಿರುವಾಗ ಬೆಟ್ಟದ ಪಾದ ಗುರಿ; ಆ ಪಾದವನ್ನು ಮುಟ್ಟಿದ ಮೇಲೆ ಶಿಖರ ಗುರಿ; ಶಿಖರಕ್ಕೇರಿದ ಮೇಲೆ, ಅಲ್ಲಿ ಕಾಣುವ ಗುಡಿಯ ಗೋಪುರ ಗುರಿ; ಗೋಪುರದ್ವಾರ ಸೇರಿದ ಮೇಲೆ, ಗರ್ಭಗೃಹ ಗುರಿ; ಅಲ್ಲಿಗೆ ಹೋದ ಮೇಲೆ, ದೇವರ ದರ್ಶನ ಗುರಿ. ಹೀಗೆ ಗುರಿಯೆಂಬುದು ಒಂದು ಗುರಿಗಳ ಸಾಲು, ಗುರಿಗಳ ಸೋಪಾನ. ಒಂದು ಮೆಟ್ಟಿಲನ್ನೇರಿದ ಮೇಲೆ ಅದಕ್ಕಿಂತ ಮೇಲಿನದು ನಮ್ಮನ್ನು ಕರೆಯುತ್ತದೆ. ಅದೇ ಪ್ರಗತಿ. ಇದರಲ್ಲೆಲ್ಲ ಮೊದಲ ಮೆಟ್ಟಿಲನ್ನು ಕಂಡುಕೊಳ್ಳುವುದು ದೊಡ್ಡದು. ಯಾವ ದಿಕ್ಕಿಗೆ ನಾವು ಮುಖ ತಿರುಗಿಸಬೇಕು ? ಯಾವ ಕಡೆಗೆ ಹೆಜ್ಜೆಯಿಡಬೇಕು? ಇದೇ ಮುಖ್ಯವಾದ ಪ್ರಶ್ನೆ.

ಒಳ್ಳೆಯದು ಎಂದರೆ ಏನು?: ಲೋಕದಲ್ಲಿ ಎಲ್ಲರೂ ಬಯಸುವುದು ಒಳ್ಳೆಯದನ್ನು. ಎಲ್ಲರಿಗೂ ಬೇಕಾದದ್ದು ಒಳ್ಳೆಯ ನಡವಳಿಕೆ-ಅಲ್ಲವೇ? ಒಳ್ಳೆಯದು ಅಂದರೆ ಏನು? ಯಾವುದು ಒಳ್ಳೆಯದು? ನಮಗೆ ಯಾವ ಯಾವುದು ಸವಿಯೆಂದೂ ಸೊಗಸೆಂದೂ ತೋರುತ್ತದೆಯೋ ಅದೆಲ್ಲ ಒಳ್ಳೆಯದೇ? ಕೆಲವರ ಬಾಯಿಗೆ ಹೆಂಡ ಸಾರಾಯಿ ಸವಿ.ಕೆಲವರ ಕಣ್ಣಿಗೆ ಪೌಡರ್ (ಹಿಟ್ಟು) ಲೇಪಿಸಿ, ಕನ್ನಡಕ ತೊಟ್ಟ ಮುಖ ಸೊಗಸು. ಅದೇ ಒಳ್ಳೆಯದೆಂದು ನಿಷ್ಕರ್ಷೆಯೇ? ನಮಗೆ ಒಂದು ಕ್ಷಣ ಇಷ್ಟವಾದದ್ದು ಕೊಂಚ ಹೊತ್ತಾದ ಮೇಲೆ ಅನಿಷ್ಟವೆಂದೆನಿಸುತ್ತದೆ. ಬಯಸಿ ಬಯಸಿ ತಂದ ತಿಂಡಿ ನಮಗೆ ತೇಗು ಬಂದ ಮೇಲೆ ಮೇಟಾಗುತ್ತದೆ. ನಮ್ಮ ಇಷ್ಟಾನಿಷ್ಟಗಳಿಗೂ ಒಳ್ಳೆಯದು ಎಂಬುದಕ್ಕೂ ಅವಶ್ಯ ಸಂಬಂಧವೇನೂ ಇಲ್ಲ, ಹಾಗಾದರೆ ಒಳ್ಳೆಯದು ಎಂಬುದರ ಸ್ವರೂಪವೆಂಥಾದ್ದು?

"ಒಳ್ಳೆಯದು" ಎಂಬುದು ಕನ್ನಡ ಮಾತು. ಅದರ ಬೇರು "ಒಳ್" "ಒಳ್" ಎಂದರೆ'' "ಇರುವುದು !''

ಉದಾಹರಣೆ: "(ಲಕ್ಷ್ಮಿಯು) ನಿನ್ನಿಂ ನಿಕೃಷ್ಟರಾದರುಮ್ ಒಳರೇ!" (ರನ್ನ ಕವಿ) ಈ ಮಾತಿಗೆ ಒಡಹುಟ್ಟಿನಂತೆ ಇರುವ ಕನ್ನಡ ಮಾತು "ಉಳ್" ಎಂಬುದು. ಉಳ್ ಎಂದರೂ "ಇರುವುದು" ಎಂದರ್ಥ. 'ಉಳ್ಳ,' ಉಂಟು ಈ ಮಾತುಗಳಲ್ಲಿ 'ಉಳ್' ಎಂಬುದು ಕಾಣ ಬರುತ್ತದೆ. ಹೀಗೆ ಒಳ್ಳೆಯದು ಎಂದರೆ ಬಹುಕಾಲ ಇರುವುದು, ಕುಂದದೆ ಇರುವುದು ಎಂದರ್ಥ. ಯಾವುದು ಅಳಿಯದೆ ಉಳಿದುಕೊಂಡಿರುತ್ತದೆಯೋ ಅದೇ 'ಉಳ್'; ಅದೇ "ಒಳ್ಳೆಯದು".

ಸಂಸ್ಕೃತದಲ್ಲಿಯೂ ಹಾಗೆಯೇ "ಸತ್" ಎಂಬ ಪದ. 'ಸತ್' ಎಂದರೆ ಒಳ್ಳೆಯದು ಎಂದೂ ಶಾಶ್ವತವಾದದ್ದು ಎಂದೂ ಎರಡರ್ಥ:

ಸದ್ಭಾವೇ ಸಾಧುಭಾವೇ ಚ ಸದಿತ್ಯೇತತ್ಪ್ರಯುಜ್ಯತೇ ॥

'ಸಜ್ಜನ', 'ಸನ್ಮಾರ್ಗ', 'ಸತ್ಕಾರ್ಯ'- ಈ ಮಾತುಗಳಲ್ಲಿ 'ಸತ್' ಎಂದರೆ 'ಒಳ್ಳೆಯದು' ಎಂಬರ್ಥ ಕಾಣ ಬರುತ್ತದೆ. 'ಸತ್ಯ', 'ಸಚ್ಚಿದಾನಂದ' '**ಏಕಂ ಸತ್**' - ಇಂಥ ಮಾತುಗಳಲ್ಲಿ 'ಸತ್' ಎಂದರೆ '**ಶಾಶ್ವತ**' ಎಂಬರ್ಥ ಕಾಣಬರುತ್ತದೆ.

ಈ ಅರ್ಥ ವಿವರಣೆಯಿಂದ ಹೊರಪಡುವುದೇನೆಂದರೆ ಯಾವುದಕ್ಕೆ ಕಾಲ ದೇಶ ಸಂದರ್ಭಗಳಿಂದ ವಿಕಾರವೂ ಹಾನಿಯೂ ಇಲ್ಲವೋ ಅದೇ ಒಳ್ಳೆಯದು. ಒಳ್ಳೆಯದೆನಿಸಿದ್ದರಲ್ಲಿ ಕೊಂಚ ಕಾಲದ್ದಕ್ಕಿಂತ ಬಹುಕಾಲದ್ದು ಹೆಚ್ಚು ಒಳ್ಳೆಯದು. ಎಂದರೆ ಏನಾಯಿತು?' ಒಳ್ಳೆಯದರ ಮುಖ್ಯ ಲಕ್ಷಣ ಬಾಳಿಕೆ. ಅದು ನಾಶವಿಲ್ಲದೆ ಏಕರೂಪದಲ್ಲಿ ನಿಂತಿರಬಲ್ಲುದು.

ಹಾಗಾದರೆ ನಮ್ಮ ಪ್ರಪಂಚದಲ್ಲಿ ಚಿರಕಾಲ ಬಾಳತಕ್ಕದ್ದು ಯಾವುದು? ನಮ್ಮ ಕಣ್ಣಿಗೂ ನಾಲಗೆಗೂ ಇತರ ಇಂದ್ರಿಯಗಳಿಗೂ ಗೊತ್ತಾಗಿರುವ ಪ್ರಪಂಚವು ಪ್ರತಿಕ್ಷಣದಲ್ಲಿಯೂ ಬದಲಾಯಿಸುತ್ತಿದೆ. ಈಗ ಇರುವುದು ಇನ್ನೊಂದು ಘಳಿಗೆಗೆ ಇಲ್ಲ. ಪ್ರಾಣಿಗಳೂ ವಸ್ತುಗಳೂ ಕ್ಷಣೇ ಕ್ಷಣೇ ನಾಶಹೊಂದುತ್ತಿರುವುದನ್ನು ನಾವು ಕಣ್ಣಾರೆ ಕಾಣುತ್ತಿದ್ದೇವೆ. ಈ ಅಶಾಶ್ವತವಾದ ಜಗತ್ತಿನಲ್ಲಿ ಯಾವುದನ್ನು ಶಾಶ್ವತವೆಂದು ಭಾವಿಸೋಣ?

ದೇವನೊಬ್ಬನೇ ಸತ್ಯ, ಅದೇ ಶಾಶ್ವತ ವಸ್ತು - ಎಂದು ನಮ್ಮ ಮಹರ್ಷಿಗಳು ಹೇಳಿದ್ದಾರೆ. ಇತರ ಎಲ್ಲ ದೇಶಗಳಲ್ಲಿಯೂ 'ಎಲ್ಲ ಮತಬೋಧಕರೂ ದೇವರು ಶಾಶ್ವತನೆಂದೂ ವಿಕಾರರಹಿತನೆಂದೂ ಸತ್ಯಜ್ಞಾನಸ್ವರೂಪನೆಂದೂ ಸಾರಿದ್ದಾರೆ. ಕ್ಷಣೇ ಕ್ಷಣೇ

ರೂಪವಿಕಾರ ಹೊಂದುತ್ತಿರುವ ಜಗತ್ತಿನ ಹಿಂದುಗಡೆ ಜಗತ್ತಿನ ಒಳಗಡೆ ಜಗತ್ತಿನ ಎಲ್ಲ ಕಡೆಗಳಲ್ಲಿಯೂ, ಒಂದು ನಿತ್ಯ ಚೈತನ್ಯ ವ್ಯಾಪಿಸಿಕೊಂಡಿದೆ. ಅದು ಭೂಮಿಯಲ್ಲಿಯೂ ಆಕಾಶದಲ್ಲಿಯೂ ಮಿಕ್ಕ ಎಲ್ಲೆಡೆಯೂ ವಸ್ತುವಸ್ತುವಿನಲ್ಲಿಯೂ ಜೀವಜೀವದಲ್ಲಿಯೂ ಅಂತರ್ಯಾಮಿಯಾಗಿ, ಎಲ್ಲಕ್ಕೂ ವಿಧಾಯಕವಾಗಿ, ಏಕೈಕ ಪ್ರಭುವಾಗಿದೆ, ಆ ಮಹಾಚೈತನ್ಯಶಕ್ತಿಯೇ ದೇವರು. ಅದೇ ಪರಮಾತ್ಮ; ಅದೇ ಪರಬ್ರಹ್ಮ; ಅದೇ ಭಗವಂತ; ಅದೇ ಒಳ್ಳೆಯದು; ಅದೇ 'ಸತ್', ಅದೇ ಸತ್ಯದ ಸತ್ಯ; ಅದೇ ಸತ್ತ್ವದ ಸತ್ತ್ವ. ಅದನ್ನು ಬಿಟ್ಟು ಬೇರೆ ಒಳ್ಳೆಯದಿಲ್ಲ.

ನಮ್ಮ ಯಾವ ನಡವಳಿಕೆ, ಯಾವ ತಿಳಿವಳಿಕೆ, ಯಾವ ಅಭ್ಯಾಸ, ಯಾವ ಅನುಭವ ಆ ಸದ್ವಸ್ತುವಿನ ಕಡೆಗೆ ನಮ್ಮನ್ನು ಕರೆದುಕೊಂಡು ಹೋಗಬಲ್ಲುದೋ ಅದು ಒಳ್ಳೆಯದು. ಯಾವುದು ಆ ಸದ್ವಸ್ತುದರ್ಶನಕ್ಕೆ ಅನುಕೂಲವಲ್ಲದೆ ಪ್ರತಿಕೂಲವೋ ಅದು ಕೆಟ್ಟದ್ದು. ದೇವರು ಒಬ್ಬನು; ಆತನ ಹೆಸರುಗಳೂ ಆಕಾರಗಳೂ ಸಾವಿರ. ಹಾಗೆಯೇ ಒಳ್ಳೆಯದು ಎಂಬ ಗುಣ ಒಂದು. ಆ ತತ್ತ್ವ ಒಂದು. ಒಳ್ಳೆಯದೆಂಬುದರ ರೂಪಗಳೂ ಕಾರ್ಯಗಳೂ ಸಾವಿರ ಬಗೆ.

ಹೀಗೆ ಮಹರ್ಷಿಗಳು ಒಳ್ಳೆಯದು ಕೆಟ್ಟದುಗಳನ್ನು ನಿಶ್ಚಯಿಸಿ, ಒಳ್ಳೆಯದಾದದನ್ನು ಪುರುಷಾರ್ಥವೆಂದು ಕರೆದಿದ್ದಾರೆ.

ಚತುರ್ವಿಧ ಪುರುಷಾರ್ಥ: ಮನುಷ್ಯನಿಗೆ ಇರಬಹುದಾದ ಒಳ್ಳೆಯ ಉದ್ದೇಶಗಳು, ಅಥವಾ ಗುರಿಗಳು, ನಾಲ್ಕು ಬಗೆಯೆಂದು ಆರ್ಯ ಮಹರ್ಷಿಗಳ ಎಣಿಕೆ: (೧) ಧರ್ಮ, (೨) ಅರ್ಥ, (೩)ಕಾಮ, (೪)ಮೋಕ್ಷ. ಮನುಷ್ಯನ ಆಶೆಗಳೂ ಯೋಚನೆಗಳೂ ಪ್ರಯತ್ನಗಳೂ ನೂರಾರು ತೆರದವಾಗಿರುತ್ತವೆ. ಅವು ಎಂಥವೇ ಆಗಿರಲಿ, ಅವುಗಳಲ್ಲಿ ಪ್ರತಿಯೊಂದನ್ನೂ ಈಗ ಹೇಳಿದ ನಾಲ್ಕು ಜಾತಿಗಳ ಪೈಕಿ ಯಾವುದಾದರೊಂದರಲ್ಲಿ ಸೇರಿಸುವುದಕ್ಕಾಗುತ್ತದೆ. ಅವುಗಳ ಪೈಕಿ ಮೊದಲ ಮೂರು ಎಲ್ಲ ಗೃಹಸ್ಥರಿಗೂ ಸಂಬಂಧಪಟ್ಟವು.

(೧) ಧರ್ಮ: ಧರ್ಮ ಎಂದರೆ ಒಳ್ಳೆಯ ನಡವಳಿಕೆ -ಆತ್ಮದ ಮೊಗ್ಗಿನ ಅರಳಿಕೆ. ಒಳ್ಳೆಯದು ಏನೆಂಬುದನ್ನು ಈಗ ತಾನೆ ಸಂಗ್ರಹವಾಗಿ ಹೇಳಿದೆ. ನಾವು ಹೇಗೆ ನಡೆದುಕೊಂಡರೆ ನಮ್ಮ ಸುತ್ತಮುತ್ತಣ ಯಾರ ಬಾಳಿಗೂ ಕೇಡಾಗದೆ, ಎಲ್ಲರ ಬಾಳೂ ಸೊಗಸುಗೊಂಡು, ನಮ್ಮ ಬಾಳೂ ಸೊಗಸಾಗುತ್ತದೆತ್ತದೆಯೋ ಅಂಥ ನಡವಳಿಕೆ ಧರ್ಮ. ಧರ್ಮವು ಜೀವನವನ್ನು ಧರಿಸಬೇಕು. ಒಬ್ಬನ ಜೀವನವನ್ನು ಮಾತ್ರವಲ್ಲ. ಅದು ಎಲ್ಲರ ಜೀವನವನ್ನೂ ಧರಿಸಿ ಪೋಷಿಸುವಂಥಾದ್ದಾಗಬೇಕು. ಅದು ಮನುಷ್ಯನ ಪಾಲಿಗೆ ಆತ್ಮವಿಕಾಸವೂ ಅವನ ಲೋಕಬಾಂಧವ್ಯದಲ್ಲಿ ಆತ್ಮ ಸಂಯಮವೂ ಆಗಿರುತ್ತದೆ. ಧರ್ಮವೆಂಬುದರಲ್ಲಿ ಸತ್ಯ, ಶುಚಿ, ಗುಣ - ಶಕ್ತಿಗಳ ಪ್ರಕಾಶ, ಜನರಲ್ಲಿ ಪರಸ್ಪರ ನ್ಯಾಯ, ಸಹಾನುಭೂತಿ, ಭೂತದಯೆ, ವಿಶ್ವಜೀವ ಗೌರವ - ಇವೆಲ್ಲ ಸೇರಿರುತ್ತವೆ. ಹಾಗೆಯೇ ದೇವರ ಧ್ಯಾನ, ಪೂಜೆ, ವ್ರತ, ಯಜ್ಞ, ದೀಕ್ಷೆ, ದಾನ, ಪರೋಪಕಾರ, ತಪಸ್ಸು - ಇಂಥ ಪುಣ್ಯ ಕಾರ್ಯಗಳು ಸೇರಿರುತ್ತವೆ. ಧರ್ಮ ಎಂಬ ಶಬ್ದವನ್ನು ಶಾಸ್ತ್ರರೀತಿಯಿಂದ ವಿವರಿಸಿ ಹೇಳುವುದು ಸಾಮಾನ್ಯ ಜನರಿಗೆ ಸಾಧ್ಯವಿಲ್ಲದಿದ್ದರೂ ಅದರ ಸ್ವರೂಪವನ್ನು ಸಾಮಾನ್ಯ ಜನರೂ ಸಹ ತಮ್ಮ ತಮ್ಮ ಮನಸ್ಸುಗಳಲ್ಲಿ ಕಂಡುಕೊಳ್ಳಲು ಸಮರ್ಥರಾಗಿರುತ್ತಾರೆ. ಲೋಕರೂಢಿಯಲ್ಲಿ ಅದು ಅಷ್ಟು ಸ್ಥಿರವಾಗಿ, ವಿಸ್ತಾರವಾಗಿ, ಬಹುಕಾಲದಿಂದ ಪ್ರಸಿದ್ಧವಾಗಿ ನಿಂತಿದೆ. ಮನು ಧರ್ಮಶಾಸ್ತ್ರದ ಈ ಶ್ಲೋಕವು ಧರ್ಮದ ಹೆಗ್ಗುರುತುಗಳನ್ನು ತಿಳಿಸುತ್ತದೆ:

ಧೃತಿಃ ಕ್ಷಮಾ ದಮೋಽಸ್ತೇಯಂ ಶೌಚಮಿಂದ್ರಿಯನಿಗ್ರಹಃ।
ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಮ್ ॥

"ಕರ್ತವ್ಯದಲ್ಲಿ ದಾರ್ಢ್ಯ, ಕ್ಷಮೆ, ತನ್ನ ಮೈಯ ಮೇಲೆ ಹತೋಟಿ, ಪರರೊಡವೆಯನ್ನು ಮುಟ್ಟದಿರುವುದು, ಪರಿಶುದ್ಧಿ, ಇಂದ್ರಿಯಗಳನ್ನು ಹದ್ದಿನಲ್ಲಿರಿಸುವುದು, ಬುದ್ಧಿವ್ಯವಸಾಯ, ವಿದ್ಯಾರ್ಜನೆ, ಸತ್ಯನಿಷ್ಠೆ, ದ್ವೇಷವಿಲ್ಲದಿರುವುದು- ಈ ಹತ್ತು ಗುಣಗಳು ಸಾಮಾನ್ಯ ಧರ್ಮದ ಲಕ್ಷಣಗಳು"

(೨) ಅರ್ಥ : ಅರ್ಥವೆಂದರೆ ಹಣ, ಭೂಮಿ, ಚಿನ್ನ, ರತ್ನ ಮೊದಲಾದ ಸಂಪತ್ತು. ಜೀವನಕ್ಕೆ ಸರಿಯಾದ ಕ್ರಮವು ಧರ್ಮವಾದರೆ, ಜೀವನಕ್ಕೆ ಆಧಾರವು ಅನ್ನ ವಸ್ತ್ರ ಸಾಮಗ್ರಿ. ಇದನ್ನು ಸಂಪಾದಿಸಿಕೊಳ್ಳಬೇಕಾದದ್ದು ಧರ್ಮದಲ್ಲಿ ಸೇರಿದ್ದೇ. ಆದರೆ ಸಂಪತ್ತಿನಲ್ಲಿ ಆವೇಶವನ್ನುಂಟು ಮಾಡುವ ಗುಣ ಅಡಗಿಕೊಂಡಿರುತ್ತದೆ. ಕೆಲವು ಬಗೆಯ ಆಹಾರ ಪಾನಕಗಳಲ್ಲಿ ಬಲ ಕೊಡುವ ಶಕ್ತಿಯುಂಟು. ಆದರೆ ಅದನ್ನು ಮಿತಿಯರಿತು ಸೇವಿಸಬೇಕು. ಮಿತಿ ಮೀರಿದರೆ ತಲೆಗೆ ಮತ್ತೇರುತ್ತದೆ. ಹಣದಿಂದಲೂ ಹಾಗಾಗುತ್ತದೆ. ಧನಪಿಶಾಚಿ ನಮ್ಮನ್ನು ಹಿಡಿದಾಗ ಧರ್ಮ ಮರೆತು ಹೋಗುತ್ತದೆ. ಅಂಥಾ ಧರ್ಮಭಂಗಕ್ಕೆ ಅವಕಾಶ ಕೊಡದಂತೆ ಧನಸಂಪಾದನೆ ಮಾಡುವುದು ಧರ್ಮದ ಒಂದು ಅವಶ್ಯ ಕರ್ತವ್ಯವೇ ಸರಿ. ಆದ್ದರಿಂದಲೇ ಅರ್ಥ ಸಂಪಾದನೆಯಲ್ಲಿ ಉದಾಸೀನನಾಗಬಾರದೆಂದು ವೇದವು ವಿಧಿಸಿದೆ: "ಭೂತ್ಯೈನ ಪ್ರಮದಿತವ್ಯಮ್!!" "ತತೋ ಮೇ ಶ್ರೀಯಮಾವಹ !!"

(೩) ಕಾಮ: ಕಾಮವೆಂದರೆ ಆಶೆ. ಅದು ಪ್ರಾಣಧಾರಣೆಗಿಂತ ಹೆಚ್ಚಾಗಿ ಬೇಕೆನ್ನಿಸುವ ಸೌಖ್ಯ ಸಂತೋಷಗಳ ಕಾಮನೆ. ಪ್ರೇಮ, ಸ್ನೇಹ, ಮೃಷ್ಟಾನ್ನ ಭೋಜನ, ಸೌಂದರ್ಯ, ಸಂಗೀತ, ನರ್ತನ, ಚಿತ್ರಪಟ - ಇಂಥವೆಲ್ಲ ಕಾಮದ ನಾನಾ ರೂಪಗಳು. ಅರ್ಥದಲ್ಲಿ ಹೇಗೆಯೋ ಕಾಮದಲ್ಲಿಯೂ ಹಾಗೆಯೇ ಮನುಷ್ಯ ತನ್ನನ್ನು ತಾನು ಮರೆತುಕೊಂಡು ಧರ್ಮದ ಎಲ್ಲೆಯನ್ನು ಮೀರುವುದುಂಟು. ಹಾಗೆ ಅತಿಕ್ರಮ ಮಾಡದೆ ಇರುವ ಕಾಮಕ್ಕೆ ಧರ್ಮವ್ಯವಸ್ಥೆಯಲ್ಲಿ ಒಂದು ಮುಖ್ಯ ಸ್ಥಳವುಂಟು. ಭಗವದ್ಗೀತೆಯಲ್ಲಿ ಭಗವಂತನು "ಧರ್ಮಾವಿರುದ್ಧೋ ಭೂತೇಷು ಕಾಮೋಸ್ಮಿ" ಎಂದು ಉಪದೇಶ ಮಾಡಿದ್ದಾನೆ. ಸುಖ ಪಡುವುದು ಪಾಪವಲ್ಲ. ಸಂತೋಷದಲ್ಲಿ ದೋಷವಿಲ್ಲ. ಆದರೆ ಧರ್ಮವನ್ನು ಮಾತ್ರ ಮರೆಯತಕ್ಕದ್ದಲ್ಲ.

ಅರ್ಥ ಕಾಮಗಳೆರಡೂ ವಿಹಿತ ಪರಿಮಿತಿಯಲ್ಲಿದ್ದಾಗ ಒಳ್ಳೆಯದು ಎಂದು ಹೇಳಿದ ಮೇಲೆ, ಮನುಷ್ಯನ ಸ್ವತಂತ್ರ ವ್ಯಾಪಾರಕ್ಕೆ ಅಲ್ಲಿ ಅವಕಾಶವುಂಟು ಎಂದ ಹಾಗಾಯಿತು. ಈ ಎರಡೂ ಕ್ಷೇತ್ರಗಳೂ ಪುರುಷೇಚ್ಛೆಗೂ ಪುರುಷಬುದ್ಧಿಗೂ ವಿಕಾಸಸ್ಥಾನಗಳು. ಆ ಪೌರುಷ ಪ್ರಭಾವದಿಂದ ಹುಟ್ಟಿ ಬೆಳೆದಿರುವುದೇ ನಾಗರಿಕತೆ, ವಿಜ್ಞಾನ, ವಾಣಿಜ್ಯ, ಕಸಬು, ಕೈಗಾರಿಕೆಗಳು, ಯಂತ್ರಚಾತುರ್ಯಗಳು, ಸಾಮಾಜಿಕ ಮರ್ಯಾದೆಗಳು, ಜನಜನಾಂಗ ಸಂಬಂಧಗಳು. ಅರ್ಥಕಾಮಗಳಿಂದ ಜೀವಕ್ಕೆ ವಿಕಾಸ, ಧರ್ಮದಿಂದ ಜೀವಕ್ಕೆ ಹಿತಚಿಕಿತ್ಸೆ.

(೪) ಮೋಕ್ಷ: ಮೋಕ್ಷವೆಂಬುದು ಸಾಮಾನ್ಯ ಮನುಷ್ಯರ ಅನುಭವಕ್ಕೆ ದೂರವಾದ ವಿಷಯ. ಧರ್ಮ-ಅರ್ಥ-ಕಾಮಗಳು ಮೂರೂ ಸಾಮಾನ್ಯ ಜನಕ್ಕೆ ಚೆನ್ನಾಗಿ ಪರಿಚಯದಲ್ಲಿರತಕ್ಕವು. ಆದ್ದರಿಂದಲೇ ಈ ಸಾಮಾನ್ಯ ಉದ್ದೇಶಗಳನ್ನು ಧರ್ಮಶಾಸ್ತ್ರಗಳಲ್ಲಿ ತ್ರಿವರ್ಗವೆಂದು ಪ್ರಶಂಸೆ ಮಾಡಿದ್ದಾರೆ. ಮೋಕ್ಷವೆಂಬುದಾದರೋ, ಅಪವರ್ಗ, ಅದು ಅಸಾಧಾರಣವಾದ ಬೇರೊಂದು ವಿಷಯ. ಅದು ವಿಶೇಷವಾಗಿ ವಿರಕ್ತರಿಗೂ, ಯತಿಗಳಿಗೂ, ಯೋಗಿಗಳಿಗೂ ಸಂಬಂಧಪಟ್ಟದ್ದು.

ಧರ್ಮ ಅರ್ಥ ಕಾಮಗಳು ಮನುಷ್ಯನಿಗೆ ಲೋಕಸಂಪರ್ಕವನ್ನು ಕಲ್ಪಿಸುತ್ತವಷ್ಟೇ? ಆ ಸಂಪರ್ಕದಿಂದ ಕಷ್ಟಕಾರ್ಪಣ್ಯಗಳು ಪರಂಪರೆಯಾಗಿ ಹೊರಟು, ಜೀವನವನ್ನು ಬಂಧಿಸಿ, ಹಿಗ್ಗಮುಗ್ಗ ಎಳೆದಾಡುತ್ತವೆ. ಇದೇ ಸಂಸಾರದ ತಾಪತ್ರಯ. ಈ ಕೋಟಲೆಯಿಂದ ಜೀವವನ್ನು ಬಿಡಿಸಿಕೊಳ್ಳುವುದೇ ಮೋಕ್ಷ. ಕೆಲವು ಮೂಲಿಕೆಗಳ ರಸವನ್ನು ಮೈಗೆ ಸವರಿಕೊಂಡರೆ ಮನುಷ್ಯನು ಬೆಂಕಿಯುರಿಯೊಳಗೆ ನಿಶ್ಚಿಂತನಾಗಿ ನಡೆಯಬಹುದಂತೆ! ಆ ರಸದ ಮಹಿಮೆಯಿಂದ ಅಗ್ನಿತಾಪ ಅವನ ಮೈಗೆ ಸೋಕದು. ಮನುಷ್ಯನಿಗೆ ಪರಮಾತ್ಮಜ್ಞಾನವೆಂಬುದು ಹಾಗೆ ತಾಪಹಾರಿಯಾದ ಕವಚ. ಯಾವ ಮಹಾಚೈತನ್ಯವು ಜಗತ್ತಿಗೆ ಆಧಾರವಾಗಿ, ಎಲ್ಲ ಪ್ರಾಣಿಗಳಲ್ಲೂ ಎಲ್ಲ ವಸ್ತುಗಳಲ್ಲೂ ವ್ಯಾಪಿಸಿಕೊಂಡು, ಜೀವಲೀಲೆಯನ್ನು ನಡೆಸುತ್ತಿದೆಯೋ ಆ ಪರವಸ್ತುವನ್ನು ತಿಳಿದುಕೊಂಡ

ವರಿಗೆ -ಎಷ್ಟು ಬೆಲೆ ಜಗತ್ತಿಗೆ ಸಲುತ್ತದೆ, ಎಲ್ಲಿ ಅದಕ್ಕೆ ಮಿತಿ, ಎಂಬುದರ ಅರಿವು ಬಂದು, ಎಲ್ಲ ಮೋಹ ಭ್ರಾಂತಿಗಳೂ ಕಳೆದುಹೋಗಿ, ಜೀವನದ ಭಾರ ಹಗುರವಾಗಿ ಶಾಶ್ವತ ಶಾಂತಿ ಲಭ್ಯವಾಗುತ್ತದೆ. ಅದೇ ಮೋಕ್ಷ. ನಮ್ಮ ಪ್ರಸಕ್ತ ವಿಚಾರಕ್ಕೆ ಮೋಕ್ಷ ವಿಷಯವು ಅಷ್ಟು ಮುಖ್ಯವಲ್ಲದಿದ್ದರೂ ಪುರುಷಾರ್ಥ ವಿವರಣೆಯನ್ನು ಕೈಗೆ ತೆಗೆದುಕೊಂಡ ಮೇಲೆ, ಅದನ್ನು ಪೂರ್ತಿ ಮಾಡುವುದಕ್ಕೋಸ್ಕರ ಇಲ್ಲಿ ಸೂಕ್ಷ್ಮವಾಗಿ ಅದನ್ನು ಪ್ರಸ್ತಾಪಿಸಿದೆ.

ಇಲ್ಲಿ ನಮ್ಮ ಉದ್ದೇಶ: ನಮ್ಮ ಬದುಕು ಚೆನ್ನಾಗಿ ಸಾಗಿ, ಸಾರ್ಥಕವಾಗಬೇಕಾದರೆ ನಮಗೆ ಒಂದು ಒಳ್ಳೆಯ ಗುರಿಯ ತಿಳಿವಳಿಕೆಯೂ, ಆ ಗುರಿಯನ್ನು ಮುಟ್ಟಿಸಬಲ್ಲ ದಾರಿಯ ತಿಳಿವಳಿಕೆಯೂ ಇರಬೇಕು. ಅಂಥ ಜೀವನಯಾತ್ರೆಯ ನಕಾಶೆಯೊಂದನ್ನು ಗುರುತು ಮಾಡಲು ಈ ಲೇಖನದಲ್ಲಿ ಯತ್ನಿಸಿದೆ.

ಅದು ಸುಲಭಸಾಧ್ಯವಾದ ಯೋಚನೆಯಲ್ಲ. ನಮ್ಮ ಪುರಾತನ ಮಹನೀಯರು ನಮಗೆ ತಕ್ಕ ಗುರಿಗೊತ್ತುಗಳನ್ನು ತಿಳಿಸಿಕೊಟ್ಟಿದ್ದಾರೆಂಬುದು ದಿಟ. ಆದರೆ ಈ ಹೊತ್ತು ಲೋಕ ಹೇಗಿದೆ? ಹತ್ತಾರು ಹೊಸ ಹೊಸ ಶಾಸ್ತ್ರಗಳೂ, ಹೊಸ ಹೊಸ ಮತಗಳೂ ತಲೆಯೆತ್ತಿ ಹತ್ತಾರು ದಿಕ್ಕುಗಳಿಗೆ ನಮ್ಮ ಬುದ್ಧಿ ಮನಸ್ಸುಗಳನ್ನು ಸೆಳೆದಾಡಿ, ಹಳೆಯ ನಿಶ್ಚಯವನ್ನು ಹೋಗಲಾಡಿಸಿ, ಹೊಸ ಸಂದೇಹ ಸಂಕ್ಷೋಭೆಗಳನ್ನು ಹರಡಿವೆ. ಈ ಹೊಸ ವಿಜ್ಞಾನ ವಿಕ್ಷಿಪ್ತವಾದ ವಾತಾವರಣದಲ್ಲಿ ನಾವು ನಮ್ಮ ಜೀವನ ಸಮಸ್ಯೆಗಳನ್ನು ಪುನರ್ವಿಚಾರದಿಂದ ವಿಮರ್ಶೆ ಮಾಡಬೇಕಾಗಿದೆ.

ಇದು ಪಂಡಿತರಿಗಾಗಿ ಬರೆದ ಗ್ರಂಥವಲ್ಲ. ದೇಶದಲ್ಲಿ ಬಹುಮಂದಿಯಾದ ಅತಿಸಾಮಾನ್ಯ ಜನರನ್ನು ದೃಷ್ಟಿಯಲ್ಲಿರಿಸಿಕೊಂಡು ಬರೆದ ಬರವಣಿಗೆ ಇದು.

ಇದನ್ನೋದುವವರಿಗೆ ಅಲ್ಲಲ್ಲಿ ಪ್ರಶ್ನೆಗಳೂ ಸಂದೇಹಗಳೂ ತೋರಬಹುದು. ಅಂಥವರು ಈ ಪುಸ್ತಕವನ್ನು ಕಡೆಯವರೆಗೂ ಓದಿದ ಬಳಿಕ ವಿಮರ್ಶೆಗೆ ಹೊರಡಬಹುದೆಂದು ಲೇಖಕನ ಮೊದಲನೆಯ ವಿಜ್ಞಾಪನೆ.

ಅವನ ಎರಡನೆಯ ವಿಜ್ಞಾಪನೆ ಏನೆಂದರೆ - ಒಂದೇ ವಾಕ್ಯದಲ್ಲಿ ಉಪದೇಶ ಬೇಕೆನ್ನುವವರಿಗೆ ಈ ಪುಸ್ತಕ ಉಪಯುಕ್ತವಾಗಲಾರದು - ಎಂದು. ಮನುಷ್ಯನ ಜೀವನಕ್ಷೇತ್ರವು ಮನುಷ್ಯನ ಭಾಷೆಗಿಂತ ವಿಸ್ತಾರವಾದದ್ದು ಮತ್ತು ಮನುಷ್ಯನ ಜೀವನದ ಕಷ್ಟ ಕಾರಣಗಳು. ಬೇರು ಮನುಷ್ಯಬುದ್ಧಿಗಿಂತ ಆಳವಾದದ್ದು. ಆದ್ದರಿಂದ "ರಾಮ ಸ್ಮರಣೆಯೇ ತಾರಕ: ವಿಭೂತಿಧಾರಣೆಯೇ ಮೋಚಕ" ಎಂಬಂಥ ಏಕಮೂಲಿಕಾ ಪ್ರಯೋಗದ ವಾಕ್ಯದಲ್ಲಿ ಜೀವನವು ಸಾರ್ಥಕವಾಗುವ ದಾರಿಗಳನ್ನೆಲ್ಲವನ್ನೂ ತೋರಿಸಿಕೊಡುವೆನೆಂಬುದು ಅಸಾಧ್ಯ ಸಾಹಸ. ಈ ಪುಸ್ತಕದ ಸಿದ್ಧಾಂತ ಅನೇಕ ಪಕ್ಷಗಳುಳ್ಳದ್ದು. ಅಥವಾ ಅದನ್ನು ಸಿದ್ಧಾಂತವೆನ್ನುವುದಕ್ಕಿಂತ ಮನಸ್ಸಿನ ಒಲವು-ಮನಸ್ಸಿನ ಮುಖಭಾವ, - ಮನೋವೃತ್ತಿ ಎನ್ನುವುದು ಸರಿಯಾದೀತು.

ನದಿ ಅಗಲವಾದಷ್ಟೂ ಅದನ್ನು ದಾಟುವ ಸೇತುವೆಗೆ ಕಮಾನುಗಳು ಹೆಚ್ಚಾಗಿರಬೇಕು. ನಮ್ಮ ಜೀವನ ಒಂದು ಮಹಾಪ್ರಸಂಗವಾದದ್ದರಿಂದ ಅದರ ಕಷ್ಟಪ್ರಶ್ನೆಗಳನ್ನು ಪೂರೈಸಲು ನಮ್ಮ ಮನಸ್ಸೂ ಬುದ್ಧಿಯೂ ಅನೇಕ ಭಾವ ಭಂಗಿಗಳಲ್ಲಿ ನಿಲ್ಲುವುದನ್ನು ಕಲಿಯಬೇಕು. ನಮ್ಮ ಬಾಳು ನಿತ್ಯದ ಕುಸ್ತಿ. ಅದಕ್ಕೆ ನಾವು ಹತ್ತೆಂಟು ಕೈಪಟ್ಟು ಕಾಲುವರಿಸೆಗಳನ್ನು ಅಭ್ಯಾಸ ಮಾಡಿಕೊಂಡಿರಬೇಕು. ಒಂದು ಕಾಲು ನಮ್ಮ ನಡಿಗೆಗೆ ಸಾಲದು; ಒಂದು ಕೈ ನಮ್ಮ ಕೆಲಸಕ್ಕೆ ಸಾಲದು. ಹಾಗೆಯೇ ಏಕವಾಕ್ಯ ಸಿದ್ಧಾಂತ ನಮ್ಮ ಬಾಳಿಗೆ ಸಾಲಲಾರದು.

ಹಾಗಾದರೆ ಇಲ್ಲಿ ಏನೋ ಒಂದು ಮಹೋಪನ್ಯಾಸವು ಸಿದ್ಧವಾಗಿದೆಯೆಂದು ಯಾರೂ ತಿಳಿಯಬಾರದು. ಈ ಉಪನ್ಯಾಸದಲ್ಲಿ ಹೇಳಹೊರಟಿರುವ ವಿಷಯ ಅಂಥ ಅಪೂರ್ವವಾದದ್ದೇನೂ ಅಲ್ಲ. ಕಠಿಣವಾದದ್ದೂ ಅಲ್ಲ, ತೊಡಕಾದದ್ದೂ ಅಲ್ಲ. ನಮ್ಮ ಜೀವನವು ಒಂದು ಹದದಲ್ಲಿ ಸಾಗಿ ತೃಪ್ತಿಕರವೆನಿಸಲು ಬಹು ವಿಶೇಷವಾದ ಗ್ರಂಥಪಾಂಡಿತ್ಯವೇನೂ ಬೇಕಾಗಿಲ್ಲ. ಒಂದೆರಡು ಸರಳವಾದ ಸೂತ್ರಗಳನ್ನು ಚೆನ್ನಾಗಿ ಮನಸ್ಸಿಗೆ ಅರ್ಥಮಾಡಿಕೊಂಡು ಗಟ್ಟಿಯಾಗಿ ಹಿಡಿದು ಅನುಸರಿಸಿದರೆ ಸಾಕು. ಇದಕ್ಕೆ ಮಹಾತ್ಮ ಗಾಂಧಿಯವರ ಜೀವನವೇ ದೊಡ್ಡ ನಿದರ್ಶನ. ಅವರೇನೂ ಮಹಾಪಂಡಿತರಲ್ಲ. ನೂರಾರು ಗ್ರಂಥಗಳನ್ನು ಶೋಧಿಸಿದ್ದವರಲ್ಲ. ಅವರು ನಾಲ್ಕೈದು ಸಾಮಾನ್ಯ ತತ್ವಗಳಲ್ಲಿ ನಂಬಿಕೆಯಿಟ್ಟು, ಶ್ರದ್ಧೆಯಿಂದ ಆ ವ್ರತವನ್ನು ನಡೆಸಿ, ಜೀವನವನ್ನು ಸಾರ್ಥಕ ಮಾಡಿಕೊಂಡರು. ತತ್ವ ಯಾವುದೇ ಆಗಲಿ, ಅದನ್ನು ನಾವು ವಿಶದವಾಗಿ ಮನದಟ್ಟು ಮಾಡಿಕೊಂಡು, ಸಂತತವಾಗಿ ಅಭ್ಯಾಸ ಮಾಡುವುದು ದೊಡ್ಡದು. ಮಹಾ ಮಹಾ ತತ್ವಗಳನ್ನೋದಿ, ಅಲ್ಪವಾಗಿ ಅನುಷ್ಠಾನ ಮಾಡುವುದಕ್ಕಿಂತ, ಕೆಲವೇ ಕೆಲವು ಸರಳ ತತ್ವಗಳನ್ನು ಚೆನ್ನಾಗಿ ಮನಸ್ಸಿಗೆ ತಂದುಕೊಂಡು ಸಂತತವಾಗಿ ಆಚರಣೆಯಲ್ಲಿರಿಸಿಕೊಳ್ಳುವುದು ಲೇಸು.

(ಕೃಪೆ : ಡಿ.ವಿ.ಜಿ. ಕೃತಿ ಶ್ರೇಣಿ)

## ಸಾಹಿತ್ಯ ಪಥ

ಜೀವನ ಚರಿತ್ರೆ : ದಿವಾನ್ ರಂಗಾಚಾರ್ಲು (1911), ಗೋಪಾಲಕೃಷ್ಣ ಗೋಖಲೆ (1915), ವಿದ್ಯಾರಣ್ಯ ವೃತ್ತಾಂತ, ವಿದ್ಯಾರಣ್ಯರ ಸಮಕಾಲೀನರು (1933), ದಾದಾಭಾಯಿ ನವರೋಜಿ (1950), ಮಕ್ಕಳ ಸಾಹಿತ್ಯ : ಬೆಕ್ಕೋಜಿ (1911), ಇಂದ್ರವಜ್ರ (1912), ಕಾವ್ಯ - ಸೌಂದರ್ಯ - ಮೀಮಾಂಸೆ : ಜೀವನ ಸೌಂದರ್ಯ ಮತ್ತು ಸಾಹಿತ್ಯ (1932), ಸಾಹಿತ್ಯ ಶಕ್ತಿ (1950), ಸಂಸ್ಕೃತಿ (1953), ಕಾವ್ಯ ಸ್ವಾರಸ್ಯ (1975), ನಾಟಕ : ಕನಕಾಲುಕಾ (1911), ತಿಲೋತ್ತಮೆ (1921), ಕನ್ನಡ ಮ್ಯಾಕ್‌ಬೆತ್ (1936), ವಿದ್ಯಾರಣ್ಯ ವಿಜಯ (1941), ಜಾಕ್‌ಕೇಡ್ (1909), ಪ್ರಹಸನ ತ್ರಯೀ (1974), ಪರಶುರಾಮ (1974), ಕವಿತೆ :ವಸಂತ ಕುಸುಮಾಂಜಲಿ (1922), ನಿವೇದನ (1924), ವಿದ್ಯಾರಣ್ಯ ಸ್ತುತಿ (1924), ಉಮರನ ಒಸಗೆ (1930), ಮಂಕುತಿಮ್ಮನ ಕಗ್ಗ (1943), ಶ್ರೀರಾಮ ಪರೀಕ್ಷಣಂ (1945), ಸ್ವತಂತ್ರ ಭಾರತ (1947), ಮಹಾತ್ಮ ಗಾಂಧಿ (1948), ಅಂತಃಪುರಗೀತೆ (1950), ಮಹಾಚುನಾವಣೆ (1951), ವಾಲ್ಮೀಕಿ ವ್ಯಾಸ ವಂದನಂ (1951), ಗೀತಶಾಕುಂತಲಮ್ (1960), ಶೃಂಗಾರ ಮಂಗಳಂ (1970), ಶ್ರೀ ಕೃಷ್ಣ ಪರೀಕ್ಷಣಂ (1973), ರಾಜಕೀಯ : ಮೈಸೂರಿನ ಕೈಗನ್ನಡಿ (1915), ವೃತ್ತಪತ್ರಿಕೆ (1928), 'ಸ್ವರಾಜ್ಯ' ಎಂದರೇನು? (1944), ರಾಜ್ಯ ಶಾಸ್ತ್ರ (1957), ರಾಜ್ಯಾಂಗ ತತ್ತ್ವಗಳು (1954), ರಾಜಕೀಯ ಪ್ರಸಂಗಗಳು (1958), ರಾಜಕೀಯ ಪ್ರಸಂಗಗಳು ಭಾಗ ೨ (1960), ಇಂಡಿಯಾದ ಭಾಷಾಪ್ರಶ್ನೆ, ಇಂಗ್ಲಿಷಿನ ಸ್ಥಾನ (1968), ಸಾರ್ವಜನಿಕದಲ್ಲಿ ಸಾತ್ವಿಕ, ಸಂಕೀರ್ಣಸ್ಮೃತಿ ಸಂಪುಟ (1977), ಡಿ.ವಿ.ಜಿ ಕೃತಿಶ್ರೇಣಿ (11ಸಂಪುಟಗಳು).

# ಡಿ. ವಿ. ಗುಂಡಪ್ಪ

- ಕೀರ್ತಿನಾಥ ಕುರ್ತಕೋಟಿ

ಶ್ರೀ ಗುಂಡಪ್ಪನವರು ಬಾಲ್ಯದಲ್ಲಿ ಹುಟ್ಟೂರಾದ ಮುಳಬಾಗಲನ್ನು ಬಿಟ್ಟು ಬೆಂಗಳೂರಿಗೆ ಬಂದು ನೆಲಸಿದ್ದು ಒಂದು ಸಾಹಸಕಥೆ. ಅವರು ಬಂದದ್ದು ಜೀವನ ನಿರ್ವಹಣೆಗಾಗಿ ಆದರೂ ಮಾಡಿದ್ದು ಜ್ಞಾನಾರ್ಜನೆ. ವಿಶ್ವವಿದ್ಯಾಲಯದ ಹೊರಗಿದ್ದುಕೊಂಡು ಕೂಡ ಜ್ಞಾನವನ್ನು ಪಡೆಯಲು ಆಗ ಅನೇಕ ಮಾರ್ಗಗಳಿದ್ದವು. ಬಲ್ಲವರ ಸಂಗತಿಯಲ್ಲಿದ್ದುಕೊಂಡೇ ಅವರು ಅವಿರತವಾಗಿ ಜ್ಞಾನವನ್ನು ಸಂಪಾದಿಸಿದರು. ಜೀವನೋಪಾಯಕ್ಕಾಗಿ ಅವರು ಹಲವಾರು ಪತ್ರಿಕೆಗಳಲ್ಲಿ ಕೆಲಸ ಮಾಡಿದ್ದರಿಂದ ಬರವಣಿಗೆಯ ಮೂಲಕವಾಗಿ ತಿಳುವಳಿಕೆಗೆ ಅಭಿವ್ಯಕ್ತಿಯನ್ನು ನೀಡುವುದು ಅನಿವಾರ್ಯವಾಯಿತು. ಈ ಅಭಿವ್ಯಕ್ತಿಯ ಉದ್ದೇಶಕ್ಕಾಗಿಯೇ ದುಡಿಯಬೇಕಾಗುತ್ತದೆ.

ಡಿ.ವಿ.ಜಿ.ಯವರ ಸಾಹಿತ್ಯವನ್ನು ಕುರಿತು ವಿಚಾರ ಮಾಡಿದಾಗಲೆಲ್ಲ ಅವರ ಬಾಳಿನ ಪರಿಸ್ಥಿತಿಯನ್ನು ಕುರಿತು ಕೂಡ ಯೋಚಿಸಬೇಕಾಗುತ್ತದೆ. ಪತ್ರಿಕೆಯ ಒತ್ತಡವಿಲ್ಲದಿದ್ದರೆ ಅವರು ಇಷ್ಟೊಂದು ಬರೆಯುತ್ತಿರಲಿಲ್ಲವೇನೋ ! ಅವರ ಸಾಹಿತ್ಯವನ್ನು ಸಂಗ್ರಹಿಸಿದಾಗ ಸಾವಿರಾರು ಪುಟಗಳಲ್ಲಿ ಹರಡಿಕೊಂಡಿದೆ. ಅವರಿಗೆ ಅಕಾಡೆಮಿ ಬಹುಮಾನವನ್ನು ತಂದುಕೊಟ್ಟ 'ಭಗವದ್ಗೀತಾ ತಾತ್ಪರ್ಯ'ಕ್ಕೆ ಮುನ್ನುಡಿಯಾಗಿ ಕೆಲ ಮಾತುಗಳನ್ನು ಹೇಳಿದ್ದಾರೆ. ಅವು ಹೀಗಿವೆ :

ಇದು ಸಂಕಲ್ಪಪೂರ್ವಕವಾಗಿ ಕುಳಿತು ರಚಿಸಿದ ಗ್ರಂಥವಲ್ಲ. ಆಗಂತುಕ ಸಂದರ್ಭಗಳಿಂದ ಹುಟ್ಟಿದ ಗ್ರಂಥ'... ಅಂಥ' ವಿಚಾರಕ್ಕೆ ಅವಶ್ಯವಾದ ಶಾಸ್ತ್ರಜ್ಞಾನವಾಗಲಿ, ಅನುಷ್ಠಾನ - ಅನುಭವಗಳಾಗಲಿ ನನ್ನ ಪಾಲಿಗೆ ಬಂದಿಲ್ಲ. ನಾನು ಪತ್ರಿಕೋದ್ಯೋಗದಿಂದ ಹೊಟ್ಟೆ ಹೊರಕೊಳ್ಳುವವನು... ಆದರೆ ದೈವದ ಅಗಟುವಿಗಟದಲ್ಲಿ ಮೈಲಿಗೆಯವನಿಗೆ ಮಡಿಯ ಕೆಲಸ ಒದಗಿ ಬರುವುದುಂಟು... ಯಾವುದು ನನಗೆ ಮೊದಲು ಉದ್ದೇಶದಲ್ಲಿರಲಿಲ್ಲವೋ ಅದು ನನ್ನ ಕಸಬಿನ ಕಾರಣದಿಂದ ವಿಹಿತ ಕಾರ್ಯವಾಯಿತು.

'ಆಗಂತುಕ ಸಂದರ್ಭ' ಮತ್ತು 'ಕಸಬಿನ ಕಾರಣ' ಈ ಮಾತುಗಳು ಇಲ್ಲಿ ಮುಖ್ಯವಾಗಿವೆ. ಭಗವದ್ಗೀತೆಯ ಬಗ್ಗೆ ಬರೆಯುವ ಅಧಿಕಾರ ಮತ್ತು ಶಾಸ್ತ್ರಗಳ ಅಧ್ಯಯನ ಡಿ.ವಿ.ಜಿ.ಯವರಿಗೆ ಇತ್ತು. ಆದರೆ ಅವರ ಅನುಷ್ಠಾನವಾಗಲಿ, ಅಧ್ಯಯನವಾಗಲಿ ಕ್ರಮ ಪ್ರಾಪ್ತವಾದದ್ದಲ್ಲ. ಅವರಿಗೆ ತೀರ ಪರಿಚಿತರಾಗಿದ್ದ ಹಾನಗಲ್ಲದ ವಿರೂಪಾಕ್ಷ ಶಾಸ್ತ್ರಿಗಳ ಪಾಂಡಿತ್ಯ ಅವರದಲ್ಲ. ಆದರೆ ಅವರ ಮನೋಧರ್ಮ ಇವರಿಗೂ ಇತ್ತು. ಡಿ.ವಿ.ಶ್ರೀಯವರ ಸ್ನೇಹಿತರೂ ಇವರಾದ್ದರಿಂದ ಅವರ ಮನೋ ಧರ್ಮವೂ ಇವರಿಗಿತ್ತು. ಇವೆರಡೂ ಕೂಡಿಕೊಂಡು ಪಾಕವಾಗಿ ಒಂದು ವಿಶಿಷ್ಟ ರೀತಿಯ ಬರವಣಿಗೆ ಸಾಧ್ಯವಾಗಬಹುದಿತ್ತು. ಆದರೆ ಅದಕ್ಕಾಗಿ ಅವಶ್ಯವಾದ ಕಾಲಾವಕಾಶ ಅವರಿಗೆ ಇರಲಿಲ್ಲ. ಪತ್ರಿಕೋದ್ಯೋಗ ಅದಕ್ಕೆ ಬೇಕಾದ ಸಾವಧಾನವನ್ನು ಮನಸ್ಸಿಗೆ ಕೊಡುವದಿಲ್ಲ. ಡಿ.ವಿ.ಜಿ.ಯವರ ಬುದ್ಧಿಯ ಸ್ವಭಾವವೆಂದರೆ ಅದರ ಪ್ರಗಲ್ಭತೆ. ಹತ್ತು ನನಗೆ ದೂರ' ಈ ಮಾತು ಮೂಡಿಸುವ ಚಿತ್ರ ಸರ್ವಜ್ಞನದು. 'ಸರ್ವರೊಳಗೊಂದು ನುಡಿ ಕಲಿತು ವಿದ್ಯೆ ಯಾ ಪರ್ವತವೆ ಆದ ಸರ್ವಜ್ಞ'. ಗುಡಿ ಮಠಗಳಲ್ಲಿಯ ವಿವಿಕ್ತತೆಗಿಂತ ಹೆಚ್ಚಿನ ಏಕಾಂತ ಸಾರ್ವಜನಿಕ ಜೀವನದಲ್ಲಿಯದು. ಡಿ.ವಿ.ಜಿ.ಯವರದು ವಿದ್ವತ್ತೆಯಲ್ಲಿ. ಕೂಡ ಅಪರಿಗ್ರಹ ವ್ರತ. ಅವರ ವ್ಯಕ್ತಿತ್ವದ ಪ್ರತ್ಯೇಕತೆ ಕುತೂಹಲಕಾರಿಯಾಗಿದೆ.

ಈ ಪ್ರತ್ಯೇಕತೆಗೂ ಅವರು ಆಯ್ದುಕೊಂಡ ಪತ್ರಿಕಾ ಪ್ರಪಂಚಕ್ಕೂ ಗಾಢವಾದ ಸಂಬಂಧವಿದೆ. ಅವರು ಪತ್ರಿಕೆಗಾಗಿಯೇ ಬರೆದರು. ಆದರೆ ಅಲ್ಲಿ ಕೂಡ ಅವರು ಬರೆದದ್ದು ದೊಡ್ಡ ವಿಷಯಗಳ ಬಗ್ಗೆ. ನವೋದಯಕಾಲದ ಲೇಖಕರೆಲ್ಲ ತಮ್ಮ ಬರವಣಿಗೆ



ವಿಷಯಗಳನ್ನು ಕುರಿತು ಅಭಿಪ್ರಾಯವನ್ನು ಹೇಳುವಷ್ಟು ಅವರ ಬುದ್ಧಿ ಪ್ರಗಲ್ಭವಾಗಿತ್ತು. ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ರಾಜಕೀಯ, ವೇದಾಂತ ಮತ್ತು ವಿಜ್ಞಾನಗಳಂಥ ಭಿನ್ನಭಿನ್ನವಾದ ವಿಷಯಗಳ ಬಗ್ಗೆ ಅವರು ಬರೆದಿದ್ದಾರೆ. ಒಂದು ಕಾಲದ ತಿಳುವಳಿಕೆಯ ಆಳ ಅಗಲ, ಅಭಿರುಚಿಯ ಹರಹು ಒಳಿತು -ಕೆಡಕುಗಳ ಪರಿಜ್ಞಾನ ಇವೆಲ್ಲ ಅವರ ಬರವಣಿಗೆಯಲ್ಲಿ ಹಾಸುಹೊಕ್ಕಾಗಿವೆ. ಭಗವದ್ಗೀತೆ, ಉಮರ ಖಯ್ಯಾಮ, ಶೇಕ್ಸಪಿಯರ - ಡಿ.ವಿ.ಜಿ.ಯವರ ಬರವಣಿಗೆಯ ವ್ಯಾಪ್ತಿಗೆ ಮತ್ತು ಆಳಕ್ಕೆ ಈ ಮೂರೂ ನಿದರ್ಶನಗಳನ್ನು ಕೊಡಬಹುದು. ಒಂದು ದೃಷ್ಟಿಯಿಂ ಇದು ತಿಳವಳಿಕೆಯ ಮಾತ್ರ ನಿಜ. ಆದರೆ ಇದರ ಹಿಂದೆಯೂ ಒಂದು ನೋವಿನ ಮಾತಿದೆ. ಸಂತೆಮಾಳಗಳು ನನಗೆ ನಿತ್ಯದ ಬಿಡಾರ, ಮಠಗುಡಿಗಳು ಯಲ್ಲಿ ಎರಡು ಉದ್ದೇಶಗಳನ್ನು ಒಪ್ಪಿಕೊಂಡಿದ್ದರು. ಒಂದು ಉದ್ದೇಶ ಆತ್ಮಾಭಿವ್ಯಕ್ತಿ ಯಾಗಿದ್ದರೆ ಇನ್ನೊಂದು ನಾಡಿನ ಸಾಂಸ್ಕೃತಿಕ ಅವಶ್ಯಕತೆಯನ್ನು ಪೂರೈಸುವದು. ಡಿ.ವಿ.ಜಿ.ಯವರ ಬರವಣಿಗೆಗೆ ಮಾತ್ರ ಎರಡನೆಯ ಉದ್ದೇಶವೇ ಪ್ರಮುಖವಾಗಿತ್ತೆಂದು ಕಾಣುತ್ತದೆ. ಅವರು ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಬರೆದರು. ಕಾವ್ಯ, ನಾಟಕ, ವಿಚಾರವಿಮರ್ಶೆ, ಸಂಶೋಧನ ಮತ್ತು ಸಂಸ್ಕೃತಿ ಪ್ರಚಾರ - ಹೀಗೆ ಹಲವಾರು ಕ್ಷೇತ್ರಗಳಲ್ಲಿ ಬರೆದರು. ಈ ಬಗೆಯ ವೈವಿಧ್ಯಕ್ಕೆ ಕಾರಣ ಕೂಡ ಇದೇ, ಸಾಂಸ್ಕೃತಿಕ ಅವಶ್ಯಕತೆಯನ್ನು ಪೂರೈಸುವದು. 'ಶ್ರೀಮದ್ ಭಗವದ್ಗೀತಾ ತಾತ್ಪರ್ಯ' ಗ್ರಂಥದಲ್ಲಿ ಅಲ್ಲಲ್ಲಿ ಪದ್ಯಗಳನ್ನು ಬರೆದಿದ್ದಾರೆ. ಈ ಪದ್ಯರಚನೆಗೆ ಅವರು

ಕೊಟ್ಟಿರುವ ಕಾರಣವೆಂದರೆ ಜ್ಞಾಪಕ ಸೌಲಭ್ಯ. ಅಲ್ಲದೆ ಇನ್ನೂ ಒಂದು ಕಾರಣವನ್ನು ಕೊಡುತ್ತಾರೆ. ಈಗಿನವರಿಗೆ ಹಳೆಯ ಕಾಲದ ಕಂದ ಮತ್ತು ವೃತ್ತಗಳು ಮರೆತು ಹೋಗಬಾರದು. ಹಾಗೆಂದು ಹಳೆಯದೆಲ್ಲದರ ಬಗ್ಗೆ ಅವರಿಗೆ ಭಾವಪರವಶತೆಯ ಪ್ರೀತಿಯೂ ಇಲ್ಲ. ಸತ್ವವಿದ್ದರೆ ಉಳಿಯುತ್ತದೆ, ಇಲ್ಲದಿದ್ದರೆ ಅದರ ಉಳಿವಿನ ಬಗ್ಗೆ ಚಿಂತಿಸಬೇಕಾಗಿಲ್ಲ ಎಂದು ಅವರೆ ಹೇಳಿದ್ದಾರೆ.

ಡಿ.ವಿ.ಜಿ.ಯವರ ಸಾಹಿತ್ಯ ರಚನೆಯ ಹಿಂದೆ ಆತ್ಮಾಭಿವ್ಯಕ್ತಿಯ ಹಂಬಲಕ್ಕಿಂತ ಸಾರ್ವಜನಿಕ ಒತ್ತಡ ಹೆಚ್ಚಾಗಿತ್ತೆಂದು ಈಗಾಗಲೇ ಹೇಳಲಾಗಿದೆ. ಶೇಕ್ಸಪಿಯರನ ಒಂದು ನಾಟಕ ಕನ್ನಡಕ್ಕೆ ಬೇಕೆಂದು ಅವರಿಗನ್ನಿಸಿದಾಗ **'ಮ್ಯಾಕ್‌ಬೆತ್'** ನಾಟಕವನ್ನು ಅನುವಾದಿಸಿದರು. ಅದಕ್ಕೊಂದು ದೊಡ್ಡ ಮುನ್ನುಡಿಯನ್ನೂ ಬರೆದರು. ಆದರೆ ಈ ಭಾಷಾಂತರದಿಂದ ಡಿ.ವಿ.ಜಿ.ಯವರ ಯಾವ ವೈಯಕ್ತಿಕವಾದ ಆಸೆ ತೃಪ್ತಿಗೊಂಡಿತೆಂದು ಹೇಳುವುದು ಕಷ್ಟ. ಈ ಮಾತು **'ಉಮರನ ಒಸಗೆ'** ಯಂಥ ಅನುವಾದಕ್ಕೂ ಅನ್ವಯಿಸುತ್ತದೆ. ಉಮರ ಖಯ್ಯಾಮ್ಮನ ಕಾವ್ಯದಲ್ಲಿಯ ತಾತ್ವಿಕ ನಿಲುವು ಕನ್ನಡದಲ್ಲಿರಲಿಲ್ಲ. ಅದು ಕನ್ನಡಕ್ಕೆ ಅಗತ್ಯ ಎಂದೆನಿಸಿದ್ದರಿಂದ ಅನುವಾದ ಮಾಡಿದರು. ಅನುವಾದ ಸರಿಯಾಗಿದೆಯೇ ಎಂದು ಇಲ್ಲಿ ಪ್ರಶ್ನೆ ಮಾಡುವಂತಿಲ್ಲ. Bowl of hight ಎನ್ನುವ ಪದ 'ನಿಶೆಯ ಬೋಗುಣಿ' ಯಾದರೆ ಪ್ರತಿ ಹೇಳುವಂತಿಲ್ಲ, ಅನುಭವಿಸಬೇಕು. ಈ ಅನುವಾದದ ಜವಾಬ್ದಾರಿ ನೈತಿಕವಾದದ್ದೇ ಹೊರತು ಕಲಾತ್ಮಕವಾದದ್ದಲ್ಲ. ಶೇಕ್ಸಪಿಯರ ಮತ್ತು ಉಮರನಂತವರು ಇಲ್ಲದಿದ್ದರೆ ಕನ್ನಡ ಸಂಸ್ಕೃತಿ ಅಪೂರ್ಣವೆಂದು ಅವರಿಗನಿಸಿದ್ದರಿಂದ ಅನುವಾದ ಮಾಡಿದರು ಅಷ್ಟೇ.

ಡಿ.ವಿ.ಜಿ.ಯವರ ಸ್ವತಂತ್ರ ಕಾವ್ಯರಚನೆಯೂ ಬೇಕಾದಷ್ಟಿದೆ. **'ಅಂತಃಪುರ ಗೀತಗಳು'** ಮತ್ತು **'ಮಂಕುತಿಮ್ಮನ ಕಗ್ಗ'** ಇವು ಈ ರಚನೆಗಳಲ್ಲಿ ಪ್ರಮುಖವಾದವುಗಳು. ಡಿ.ವಿ.ಜಿಯಯವರಿಗೆ ಕರ್ನಾಟಕ ಸಂಗೀತದ ನೂರಾರು ಕೃತಿಗಳ ಪರಿಚಯವಿತ್ತು. ಆದರೆ ತ್ಯಾಗರಾಜರು, ಕ್ಷೇತ್ರಜ್ಞ, ವಾಸುದೇವಾಚಾರ್ಯ ರಂಥವರು ತಮಿಳು, ತೆಲುಗು, ಸಂಸ್ಕೃತಗಳಲ್ಲಿ ಬರೆದರು. ಡಿ.ವಿ.ಜಿ.ಯವರಿಗೆ ಕೃತಿಗಳಂತೆ ಸಂಗೀತಗಾರರ ಪರಿಚಯವೂ ಸಾಕಷ್ಟಿತ್ತು. ಬೇಲೂರಿನ ಶಿಲಾಬಾಲಿಕೆಯರ ಕಲಾ ಸೌಂದರ್ಯ ಮೊದಲಿನಿಂದಲೂ ಅವರನ್ನು ಆಕರ್ಷಿಸಿತ್ತು. ಕೀಟ್ಸ ಕವಿಯ Heard melodies are sweet but those unheard are seeter still ಎಂಬ ಹೇಳಿಕೆಯನ್ನು ಉಪಯೋಗಿಸಿ ಬಹಳ ಹಿಂದೆಯೇ ಒಂದು ಕವಿತೆಯನ್ನು ಬರೆದಿದ್ದರು. ಬೇಲೂರಿನ ಶಿಲ್ಪವೆಂದರೆ 'ಅಶ್ರುತಗಾನ'ವೆಂದೇ ಅವರಿಗೆ ಎನಿಸಿರಬೇಕು. ಅಂತೆಯೇ ಈ ಶಿಲಾಬಾಲಿಕೆಯರನ್ನು ಶೃಂಗಾರ ನಾಯಿಕೆಯರನ್ನಾಗಿ ಪರಿವರ್ತಿಸಿ ಈ ಕೃತಿಗಳನ್ನು ಅವರು ಬರೆದಿದ್ದಾರೆ. ಬೇಲೂರು ಚೆನ್ನಕೇಶವನ ಅಂತಃಪುರದಲ್ಲಿಯ ಈ ನಾಯಿಕೆಯರು ಅಭಿಜಾತಕಲೆಯ ಸಾಕಾರ ಮೂರ್ತಿಗಳು. ಇಲ್ಲಿಯ ಕಾವ್ಯವೆಂದರೆ ಅಭಿಜಾತ ಸಂಗೀತ ಇನ್ನೊಂದು ರೂಪವಾಗಿದೆ. ಜಯದೇವನ ಅಷ್ಟಪದಿಗಳು, ಕ್ಷೇತ್ರಜ್ಞನ ಪದಗಳಂತೆ ಇವೂ ಗೀತಕೃತಿಗಳು. ವಾಸುದೇವಾಚಾರ್ಯರಂಥ ಸಂಗೀತಗಾರರು ಹಾಡಿದಾಗ ಮಾತ್ರ ಇವುಗಳ ಸೊಗಸು ಎಂಥದೆಂದು ಗೊತ್ತಾಗಬೇಕು.

**'ಮಂಕುತಿಮ್ಮನಕಗ್ಗ'**ದ ಮಾತು ಬೇರೆ, ಸರ್ವಜ್ಞನ ತ್ರಿಪದಿಗಳಂತೆ ಇವೂ ಬಿಡಿಬಿಡಿಯಾದ ಪದ್ಯಗಳು. ಮನುಷ್ಯ ಜೀವನದ ಅರ್ಥಪ್ರಪಂಚವೇ ಈ ಪದ್ಯಗಳ ವಸ್ತುವಾಗಿದೆ. 'Poetry is the criticism of life' ಎಂಬ ಮ್ಯಾತ್ಯೂ ಆರ್ನಲ್ಡನ ಹೇಳಿಕೆಯನ್ನು ಅವರು ಕಾವ್ಯದ ಸರ್ವಗ್ರಾಹ್ಯವಾದ ವ್ಯಾಖ್ಯೆಯೆಂದು ತಮ್ಮ **'ಕಾವ್ಯಸ್ವಾರಸ್ಯ'**ವೆಂಬ ಗ್ರಂಥದಲ್ಲಿ ಹೇಳಿದ್ದಾರೆ. ಆ ವ್ಯಾಖ್ಯೆಗೆ ಒಪ್ಪುವ ಕಾವ್ಯ ಇಲ್ಲಿದೆ. ಅದೇ ಗ್ರಂಥದ ಕೊನೆಯಲ್ಲಿ ತಮ್ಮ ಕಾವ್ಯ ಸೂತ್ರವನ್ನು ಹೇಳುವ ಒಂದು ಕಂದ ಪದ್ಯವನ್ನೂ ಅವರು ಬರೆದಿದ್ದಾರೆ. 'ಹೃದಯದ ಭಾಷಿತೆ ಕಾವ್ಯಂ' ಎಂದು ಹೇಳಿ ಕೊನೆಯಲ್ಲಿ 'ಮಧು ತುಂಬಿದ ಕುಂಡಿಯಲ್ತೆ ವೈದ್ಯೋಪಾಯಂ' ಎಂದೂ ಹೇಳಿದ್ದಾರೆ. ಕಾವ್ಯ ರಸವನ್ನು ಹುಟ್ಟಿಸುತ್ತ ನೀತಿಯನ್ನೂ ಹೇಳಬೇಕು ಎನ್ನುವದು ಅವರ ಅಭಿಪ್ರಾಯ. 'ಮಂಕುತಿಮ್ಮನ ಕಗ್ಗ'ದಲ್ಲಿ ಅಂಥ 'ವೈದ್ಯೋಪಾಯ'ವಿದೆ. ಆದರೆ ಕಾವ್ಯ ದೃಷ್ಟಿಯಿಂದ ಈ ಪ್ರಯತ್ನದಲ್ಲಿ ಅನೇಕ ಸಮಸ್ಯೆಗಳಿವೆ. ಡಿ.ವಿ.ಜಿ.ಯವರ ಕಾವ್ಯ ಶಾಸ್ತ್ರದ ಪ್ರಕಾರ ಕೂಡ ಪ್ರತಿಭೆ ಕಂಡ ದರ್ಶನ ಅನುಭವವಾಗದೆ ಕಾವ್ಯದಲ್ಲಿ ರಸ ಹುಟ್ಟಲಾರದು. ಆದರೆ 'ಬದುಕು ಜಟಕಾ ಬಂಡಿ ವಿಧಿಯದರ ಸಾಹೇಬ' ಇಂಥ ಸಾಲುಗಳಲ್ಲಿ ಪ್ರತಿಮೆಗಳು ನೀಡುವ ಅನುಭವಕ್ಕೂ, ಕಾವ್ಯದರ್ಶನಕ್ಕೂ ಇರುವ ಅಂತರದಿಂದ ಕಾವ್ಯಕ್ಕೆ ಕಾವ್ಯದ ಸ್ವರೂಪ ಬರುವುದಿಲ್ಲ. 'ಆತ್ಮಾನಂರಥಿನಂ ವಿದ್ಧಿ ಶರೀರಂ ರಥಮೇವ ಚ' ಎಂಬ ಕಾವ್ಯಪಂಕ್ತಿ ಕಾವ್ಯವಾಗುತ್ತದೆ, ಈ ಸಾಲು ಕಾವ್ಯವಾಗುವುದಿಲ್ಲ ಎಂಬ ಸಂಗತಿಗೆ ಕಾರಣವೆಂದರೆ ನಮ್ಮ ಬದುಕು ಜಟಕಾ ಬಂಡಿಯಾಗಿಲ್ಲ ಎಂದಾದರೂ ಇರಬಹುದು ಅಥವಾ ಜಟಕಾಬಂಡಿಗೆ ಡಿ.ವಿ.ಜಿ.ಯವರ ಕಾವ್ಯಶಾಸ್ತ್ರ ಪ್ರತಿಮೆಯ ಸ್ವರೂಪವನ್ನು ದಯಪಾಲಿಸಿಲ್ಲ. ಕಾವ್ಯ ಪ್ರತಿಮೆಯ ಮುಖರತೆ ಎಂದರೆ ಅದರ ಹಿಂದೆ ಇರುವ ಮೌನದ ಅಭಿವ್ಯಕ್ತಿ. ಡಿ.ವಿ.ಜಿ.ಯವರ ಪ್ರತಿಭೆಗೆ ದೊರೆತದ್ದು ಶ್ರುತಗಾನದ ಅಭಿರಾಮತೆ. ಅಶ್ರುತಗಾನ ಎಷ್ಟೇ ಅಭಿರಾಮಕರವೆಂದು ಅವರ ಪ್ರತಿಭೆ ನಂಬಿದ್ದರೂ ಅವರ ಕಿವಿಗೆ, ಒಳಗಿವಿಗೆ ಅದು ಕೇಳಿಸಿಲ್ಲ. 'ಮಂಕುತಿಮ್ಮನ ಕಗ್ಗ'ದಲ್ಲಿ ವೈಚಾರಿಕ ಸಂಪತ್ತು ಹೇರಳವಾಗಿದೆಯೆಂದು ಒಪ್ಪಿಕೊಂಡರೂ ಅದೆಲ್ಲ ಎಷ್ಟರ ಮಟ್ಟಿಗೆ ಕವಿತೆಯ ಅನುಭವವಾಗಿ ಬಂದಿದೆ ಎನ್ನುವುದು ಸಂಶಯಾಸ್ಪದವಾಗಿದೆ.

ಸಂಸ್ಕೃತಿ ನಿರ್ಮಾಣ, ಕಾಲದ ಅವಶ್ಯಕತೆಗಳನ್ನು ಪೂರೈಸುವದು. ಇಂಥ ಉದ್ದೇಶಗಳಿಂದ ಪ್ರೇರಿತವಾದ ಡಿ.ವಿ.ಜಿ.ಯವರ ಸಾಹಿತ್ಯರಚನೆಯ ಸ್ವರೂಪ ವಿಶಿಷ್ಟವಾದದ್ದು. ಈ ಉದ್ದೇಶಗಳ ಪೂರ್ತಿಗಾಗಿ ಪತ್ರಿಕೆ ಅನುಕೂಲವಾದ ಮಾಧ್ಯಮವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಪತ್ರಿಕೆಯ ಲಕ್ಷ್ಯವೆಲ್ಲ ಸಮಕಾಲೀನ ಇತಿಹಾಸದ ಕಡೆಗೆ ಇರುತ್ತದೆ. ಸಮಕಾಲೀನ ಜೀವನದಲ್ಲಿಯ ಆಗು ಹೋಗುಗಳನ್ನು, ಮುಂದೆ ಅವೆಲ್ಲ ಇತಿಹಾಸವಾಗಲಿರುವುದನ್ನು ಅರಿತುಕೊಂಡು ಪತ್ರಿಕಾ ಸಾಹಿತ್ಯ ಅವುಗಳನ್ನು ದಾಖಲಿಸುತ್ತದೆ. ನಮ್ಮ ದೇಶದಲ್ಲಿ ಸಮಕಾಲೀನ ಜೀವನದಲ್ಲಿ ಸಮಸ್ಯೆಗಳಿಗೇನೂ ಕೊರತೆಯಿಲ್ಲ. ಈ ಸಮಸ್ಯೆಗಳನ್ನು ಅಭ್ಯಾಸ ಮಾಡುತ್ತ ಡಿ.ವಿ.ಜಿ.ಯವರು ಕೆಲವು ಐತಿಹಾಸಿಕ ತಿಳುವಳಿಕೆಯ ಪ್ರತಿಮೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಈ ದೇಶದ ರಾಜಕೀಯಕ್ಕೂ ನಮ್ಮ ಸಾಮಾಜಿಕ ಸಂಸ್ಕೃತಿಗೂ ಒಂದು ಸಂಬಂಧವನ್ನು ಕಲ್ಪಿಸಿದ್ದಾರೆ. ಇನ್ನೊಂದು ದಿಕ್ಕಿನಿಂದ ತಮಗೆ ಗೊತ್ತಿರುವ ಹಳೆಯ ಕಾಲದ ಸಂಗತಿಗಳನ್ನು ಮತ್ತು ವ್ಯಕ್ತಿಗಳನ್ನು ಸ್ಮರಿಸಿಕೊಂಡಿದ್ದಾರೆ.

ಅವರ **'ಜ್ಞಾಪಕ ಚಿತ್ರಶಾಲೆಯ'** ಸಂಪುಟದಲ್ಲಿ ಈ ಬಗೆಯ ಬರವಣಿಗೆ ಇದೆ. ಡಿ.ವಿ.ಜಿ.ಯವರು ಆತ್ಮೀಯವಾಗಿ ಸಂಬಂಧವನ್ನಿಟ್ಟುಕೊಂಡ ಮಹನೀಯರನ್ನೆಲ್ಲ ನೆನಪು ಮಾಡಿಕೊಂಡು ಅವರ ವ್ಯಕ್ತಿ ಚಿತ್ರಗಳನ್ನು ಕಾಣಿಸಿದ್ದಾರೆ. ಸಾಹಿತ್ಯ, ಕಲೆ, ಸಂಗೀತ ಶಿಕ್ಷಣ, ರಾಜಕೀಯ ಮುಂತಾದ ಹಲವಾರು ಕ್ಷೇತ್ರಗಳಲ್ಲಿ ದುಡಿದು ಹೆಸರು ಮಾಡಿರುವ ಮಹನೀಯರ ಈ ಚಿತ್ರ ಶಾಲೆಯನ್ನು ಕಂಡಾಗ ಡಿ.ವಿ.ಜಿ.ಯವರ ಸಂಬಂಧಗಳ ಹರಹು ಎಷ್ಟು ದೊಡ್ಡದೆಂಬುದು ಗೊತ್ತಾಗುತ್ತದೆ. ಮೈಸೂರು ಸಂಸ್ಥಾನದ ದಿವಾನರುಗಳ ಬಗ್ಗೆ, ಅದರಲ್ಲಿಯೂ ಸರ್.ಎಂ. ವಿಶ್ವೇಶ್ವರಯ್ಯ, ಸರ್ ಮಿರ್ಜಾ ಇಸ್ಮಾಯಿಲ್‌ರಂಥವರ ಬಗ್ಗೆ ಬರೆಯುವಾಗಲೆಲ್ಲ ಅವರು ಸಂಸ್ಕೃತಿಯ ಶಿಲ್ಪಿಗಳು ಎಂಬ ಮಹತ್ವದ ಸತ್ಯದ ಬಗ್ಗೆ ಕಾಳಜಿ ವಹಿಸಿದ್ದಾರೆ. ಸಾಹಿತ್ಯ ಪರಿಷತ್ತು, ಗೋಖಲೆ ಇನ್ಸ್‌ಟಿಟ್ಯೂಟ್ ಮೊದಲಾದ ಸಂಸ್ಥೆಗಳು ನಮ್ಮ ಸಾರ್ವಜನಿಕ ಜೀವನಕ್ಕೆ ಕೊಟ್ಟ ತಿರುವು ಕೂಡ ಅವರ ಕಣ್ಣು ತಪ್ಪಿಸಿ ಹೋಗುವದಿಲ್ಲ. ಡಿ.ವಿ.ಜಿಯವರು ಬರೆದಿರುವ ವ್ಯಕ್ತಿ ಚಿತ್ರಗಳು ತಮ್ಮಷ್ಟಕ್ಕೆ ತಾವು ಸಂಪೂರ್ಣವಾಗಿವೆ. ಅನ್ನುವದರಲ್ಲಿ ಸಂದೇಹವಿಲ್ಲ. ಬರೆವಣಿಗೆಯ ಉದ್ರೇಕಕ್ಕೆ ತಕ್ಕಂತೆ ಅವು ಕಳೆದು

ಹೋದ ಇತಿಹಾಸವನ್ನು ಪುನಃ ಸೃಷ್ಟಿಸುತ್ತವೆ. ಒಂದು ಕಾಲದ ಬಣ್ಣ ಮತ್ತು ವಾಸನೆಗಳನ್ನು ಅನುಭವಕ್ಕೆ ತಂದುಕೊಡುತ್ತವೆ. ಮುಳುಬಾಗಲ, ಮೈಸೂರು ಮೊದಲಾದ ಸ್ಥಳಗಳಲ್ಲಿ ಒಂದು ಕಾಲಕ್ಕೆ ಇದ್ದ ಸಾಂಸ್ಕೃತಿಕ ಜೀವನವನ್ನು ವಸ್ತುನಿಷ್ಠವಾಗಿ ಚಿತ್ರಿಸುತ್ತವೆ. ಆದರೆ ಅವು ಅಳಿದು ಹೋದದ್ದಕ್ಕೆ ಕಾರಣಗಳನ್ನು ಹುಡುಕುವದಿಲ್ಲ. ರಾಜಾಶ್ರಯದಲ್ಲಿ, ಸಾಹುಕಾರರ ಆಶ್ರಯದಲ್ಲಿ ಕಲೆಗಳು ಬೆಳೆದವು. ಈಗ ಬೆಳೆಯುವದಿಲ್ಲವಲ್ಲ ಎಂಬ ವಿಷಾದ ಮಾತ್ರ ಅಲ್ಲಲ್ಲಿ ವ್ಯಕ್ತವಾಗಿದೆ.

ಗುಂಡಪ್ಪನವರು ಬೆಳೆದು ಬಂದ ಕಾಲ ಇತಿಹಾಸದ ಸಂಧಿಕಾಲ. ಈ ಶತಮಾನದಲ್ಲಿ ಎಪ್ಪತ್ತೈದು ವರ್ಷಗಳ ಕಾಲ ಬದುಕಿದ್ದವರು. ಆದರೆ ಕಳೆದ ಶತಮಾನದ ಸಾಂಸ್ಕೃತಿಕ ಜೀವನದ ವೈಭವವನ್ನೂ ಕಂಡವರು. ಸಮಕಾಲೀನತೆಗೆ ಹಳೆಯ ಜೀವನ ಮರೆಯದಂತೆ ನೋಡಿಕೊಳ್ಳುವದು ತಮ್ಮ ಕರ್ತವ್ಯವೆಂದು ನಂಬಿದವರು. ಆದರೆ ಸಮಸ್ಯೆ ಎಂದರೆ ಈ ಇತಿಹಾಸಕ್ಕೂ ಡಿ.ವಿ.ಜಿ.ಯವರ ಸ್ವಂತ ಪ್ರಜ್ಞೆಗೂ ಇರಬಹುದಾದ ಸಂಬಂಧದ ಬಗ್ಗೆ ವಿಶ್ವೇಶ್ವರಯ್ಯರವರ ಪ್ರಾಮಾಣಿಕತೆ, ಕಾರ್ಯದಕ್ಷತೆ ಜೀವನ ದರ್ಶನ ಇವುಗಳ ಬಗ್ಗೆ ಪ್ರೀತಿಯಿಂದಲೇ ಬರೆಯುತ್ತಾರೆ. ಅವರ ವ್ಯಕ್ತಿತ್ವ ಎಂದು ಬಗೆಯ ವಾತಾವರಣದಲ್ಲಿ ಮಾತ್ರ ಬೆಳೆಯಬಲ್ಲದು ಎಂಬ ಸತ್ಯವೂ ಅವರಿಗೆ ಗೊತ್ತು. ಇವುಗಳ ಜೊತೆಗೇ ವಿಶ್ವೇಶ್ವರಯ್ಯನವರು ಎರಡು ಚಮಚ ಒಬ್ಬಟ್ಟು ತಿಂದು ಅದನ್ನು ನಮ್ಮ national delicacy ಎಂದು ಕರೆದರು ಎಂದೂ ಹೇಳುತ್ತಾರೆ. ಭವ್ಯವೆಂದು ಅವರೇ ಕರೆದ ಇತಿಹಾಸದ ಜೊತೆಗೆ ಡಿ.ವಿ.ಜಿ.ಯವರ ಸಂಬಂಧವೆಂದರೆ ಈ ಒಬ್ಬಟ್ಟಿನ ಪ್ರತಿಮೆ ಸಂಸ್ಕೃತಿಯಯ ಪೂರ್ಣ ಅರ್ಥವನ್ನು ಈ ಪ್ರತಿಮೆ ಅವರಿಗೆ ತಿಳಿಸುತ್ತದೆ. ಪ್ರತಿಮೆಗಳ ಭಾಷೆ ಅತ್ಯಂತ ಆತ್ಮೀಯವಾದ ಭಾಷೆ.

ಇಂದು ಕಾಲಕ್ಕೆ ವಿದ್ಯಾರಣ್ಯರು ಕಟ್ಟಿದ ರಾಷ್ಟ್ರಜೀವನ ನಮ್ಮ ಇತಿಹಾಸದ ಪುನರಾವರ್ತನೆಯಲ್ಲಿ ತಿರುಗಿ ಬರಬೇಕೆಂದು ಡಿ.ವಿ.ಜಿ. ಕನಸು ಕಂಡಿದ್ದರು. ಅವರು ವಿದ್ಯಾರಣ್ಯರ ಬಗ್ಗೆ ಬರೆದ ದೊಡ್ಡ ನಾಟಕ ನಾಟಕದಂತಿಲ್ಲ ಎಂದು ಕೆಲವು ವಿಮರ್ಶಕರು ಆಕ್ಷೇಪಿಸಿದ್ದಾರೆ. ಅದು ನಾಟಕ ರೂಪದಲ್ಲಿಯ ಒಂದು ಪ್ರಬಂಧ. ಆ ನಾಟಕದಲ್ಲಿ ವಿದ್ಯಾರಣ್ಯರ ಪಾತ್ರ ರಚನೆಯಲ್ಲಿಯೇ ಸತ್ವವಿಲ್ಲ. ವಿಜಯನಗರ ಸಾಮ್ರಾಜ್ಯ ಇತಿಹಾಸದ ಒಂದು ವಾಸ್ತವ ಸಂಗತಿಯಾದ್ದರಿಂದ ವಿದ್ಯಾರಣ್ಯರೊಡನೆ ಈ ಸಾಮ್ರಾಜ್ಯದ ಸಂಬಂಧವನ್ನೂ ಒಂದು ವಾಸ್ತವ ಸಂಗತಿಯೆಂದು ಗ್ರಹಿಸಿ ನಾಟಕವನ್ನು ಬರೆದಂತಾಗಿದೆ. ಅದೇನೇ ಇದ್ದರೂ ಡಿ.ವಿ.ಜಿ. ಯವರ ಕನಸುಗಳು ಕೂಡ ವಿದ್ಯಾರಣ್ಯರ ವೈರಾಗ್ಯದಂತೆ ವಾಸ್ತವದೊಡನೆ ಜೀವಂತವಾದ ಸಂಬಂಧವನ್ನು ಕಳೆದುಕೊಂಡಂಥವಾಗಿವೆ. ಈ ನಾಟಕದಲ್ಲಿ ಕಾಣುವದು ವಿದ್ಯಾರಣ್ಯರ ಸನ್ನಿಧಿ ಅಷ್ಟೇ. ಹರಿಹರ, ಬುಕ್ಕ ಮೊದಲಾದ ರಾಜರು ಒಬ್ಬರಾದ ಮೇಲೊಬ್ಬರು ಹೋದರೂ ನೂರಾಹತ್ತು ವರ್ಷಗಳವರೆಗೆ ಜೀವಿಸಿದ್ದ ವಿದ್ಯಾರಣ್ಯರಿಗೆ ಆ ಸಾಮ್ರಾಜ್ಯದಿಂದ ಆದ ಲಾಭವೇನು? ಗೌಡಪಾದ, ಶಂಕರ ಮೊದಲಾದವರ ವೇದಾಂತ ದರ್ಶನದ ಪರಂಪರೆಗೆ ತಮ್ಮ ಕಾಣಿಕೆಯನ್ನಿತ್ತ ವಿದ್ಯಾರಣ್ಯರ ದರ್ಶನದಲ್ಲಿ ಈ ಸಾಮ್ರಾಜ್ಯದ ಪಾಲು ಎಷ್ಟು? ಈ ಪ್ರಶ್ನೆಗೆ ಉತ್ತರ ಹೇಳುವದು ಕಷ್ಟ. ಡಿ.ವಿ.ಜಿ. ಯವರು ಬರೆದಿರುವ ಇತಿಹಾಸದ ಬರವಣಿಗೆಯಲ್ಲಿ ಡಿ.ವಿ.ಜಿ.ಯವರನ್ನು ಹುಡುಕುವದೂ ಕಷ್ಟ. ಅವರು ಕವಿತೆಯನ್ನೇ ಬರೆಯಲಿ, ನಾಟಕವನ್ನೇ ಬರೆಯಲಿ, ವ್ಯಕ್ತಿಚಿತ್ರ, ಜೀವನವೃತ್ತ ಹೀಗೆ ಹಲವಾರು ಪ್ರಕಾರಗಳನ್ನೇ ನಿರ್ಮಿಸಲಿ, ಅವೆಲ್ಲ ಬರವಣಿಗೆಯ ಅನಿವಾರ್ಯತೆಯಿಂದ ಹುಟ್ಟಿದ ಕೃತಿಗಳು. ನಿಜವಾಗಿ ಅವರು ಬರೆದದ್ದು ಸಮಕಾಲೀನ ಇತಿಹಾಸ. ಅವರ **'ಜ್ಞಾಪಕ ಚಿತ್ರಶಾಲೆ'**ಯ ಸಂಪುಟಗಳು ಈ ಮಾತಿಗೆ ಸಾಕ್ಷಿಯಾಗಿವೆ. ಇತಿಹಾಸಕಾರ ಇತಿಹಾಸದ ತೊಡಕಿನಲ್ಲಿ ಸಿಕ್ಕಿ ಬೀಳುವದಿಲ್ಲ. ಡಿ.ವಿ.ಜಿ.ಯವರಂತೂ ಅದರಿಂದ ತಮ್ಮನ್ನು ದೂರವಿಟ್ಟುಕೊಂಡವರು. ಅವರು ಕೇಳಲು ಹಾತೊರೆದಿದ್ದು ಅಶ್ರುತಗಾನವನ್ನು. ಅದನ್ನು ಅವರು ಕೇಳಿದರೋ ಇಲ್ಲವೋ ಎಂಬುದು ಗೊತ್ತಾಗುವಂತಿಲ್ಲ. 'ಸಂತೆಮಾಳದಲ್ಲಿ ನನ್ನ ಬಿಡಾರ' ಎಂದು ಅವರು ಹೇಳಿದ್ದು ನಿಜವೇ. ತಮ್ಮನ್ನು ಯಾವ ಮಠಕ್ಕೂ, ಸಂಸ್ಥೆಗೂ ಕಟ್ಟಿಹಾಕಿಕೊಳ್ಳಲಿಲ್ಲ. ಹಾಗೆಂದು ಅವರು ಕಾಡಿಗೂ ಹೋಗಲಿಲ್ಲ. ಜೀವಮಾನವೆಲ್ಲ ಬೆಂಗಳೂರಲ್ಲಿಯೇ ಕಳೆದರು. ಈ ಜಗತ್ತಿಗೆ ಅತಿಥಿಯಂತೆ ಬಂದು ಅತಿಥಿಯಂತೆಯೇ ಹೋದರು. ಅವರು ಬರೆದಿರುವದು ಬೇಕಾದಷ್ಟಿದೆ. ಆದರೆ ಬರೆಯದಿರುವದು, ಹೇಳದಿರುವದು ಅದಕ್ಕಿಂತ ಮಹತ್ವದಿದೆಯೆಂದು ಅನ್ನಿಸುತ್ತದೆ. 'ಅವ್ಯಾಹೃತಂ ವ್ಯಾಹೃತಾಚ್ಛ್ರೇಯ ಆಹುಃ' ಎಂಬ ಹೇಳಿಕೆಯನ್ನು ಅವು ಒಂದು ಕಡೆಗೆ ಉದಾಹರಿಸಿದ್ದಾರೆ. ಇದರ ಅರ್ಥವೆಂದರೆ 'ಹೇಳಲಾರದೆ ಉಳಿದದ್ದು ಹೇಳಿದ್ದಕ್ಕಿಂತ ಹೆಚ್ಚಿನದು'. ಮಾತಿಗಿಂತ ಮೌನ ಮೇಲು, ಆಡಲೇಬೇಕಾದರೆ ಸತ್ಯವನ್ನಾಡಬೇಕು. ಡಿ.ವಿ.ಜಿ. ಬೇಕಾದಷ್ಟು ಮಾತಾಡಿದ್ದಾರೆ. ಆದರೆ ಅವರು ಮಾತಾಡಿದ್ದೆಲ್ಲ ವಿವಾದಗ್ರಸ್ತವಾಗಬಹುದು. ಇತಿಹಾಸದ ಮೇಲೆಯೇ ಅವರ ಲಕ್ಷ್ಯವಿದ್ದರೂ ಇತಿಹಾಸ ಅವರ ಮಾತು ಕೇಳಿ ಬದಲಾಗಲಿಲ್ಲ. ಆದರೆ ಅವರು ಹೇಳದೆ ಇರುವದು ಹೆಚ್ಚು ಶ್ರೇಯಸ್ಕರವಾದದ್ದು. ಈ ಸತ್ಯ ಅವರು ಹೇಳಿದ್ದರ ಮೇಲಿಂದಲೇ ಗೊತ್ತಾಗುವಂಥದು.

(ಕೃಪೆ : ನೂರು ಮರ ನೂರು ಸ್ವರ)

## *ವನ ಸುಮ*

*(ಅಠಾಣ ರಾಗ - ರೂಪಕ ತಾಳ)*

*ವನಸುಮದೊಲೆನ್ನ ಜೀ ।*
*ವನವು ವಿಕಸಿಸುವಂತೆ ।*
*ಮನವನನು ಗೊಳಿಸು ಗುರುವೇ ಹೇ ದೇವ ॥ ಪ ॥*

*ಜನಕೆ ಸಂತಸವೀವ ।*
*ಘನನು ನಾನೆಂದೆಂಬ ।*
*ಎಣಿಕೆ ತೋರದೆ ಜಗದ ಪೊಗಳಿಕೆಗೆ ಬಾಯ್ ಬಿಡದೆ ॥ ಅ - ಪ ॥*

*ಕಾನನದಿ ಮಲ್ಲಿಗೆಯು ।*
*ಮೌನದಿಂದ ಬಿರಿದು ನಿಜ ।*
*ಸೌರಭವ ಸೂಸಿ ನಲವಿಂ ।*
*ತಾನೆಲೆಯ ಪಿಂತಿರ್ದು ।*
*ದೀನತೆಯ ತೋರಿ ಅಭಿ ।*
*ಮಾನವನು ತೊರೆದು ಕೃತಕೃತ್ಯತೆಯ ಪಡೆವಂತೆ ॥ ೧ ॥*

*ಉಪಕಾರಿ ನಾನು ಎ ।*
*ನ್ನುಪಕೃತಿಯು ಜಗಕೆಂಬ ।*
*ವಿಪರೀತ ಮತಿಯನುಳಿದು ॥*
*ವಿಪುಲಾಶ್ರಯವನೀವ ।*
*ಸುಫಲ ಸುಮ ಭರಿತ ಪಾ ।*
*ದಪದಂತೆ ನೈಜಮಾದೊಳ್ಪಿನಿಂ ಬಾಳ್ವವೊಲು ॥ ೨ ॥*

- ಡಿವಿಜಿ


**MATRIMONIAL**

Wanted sankethi boy or any Brahmin (kannada) age 27 to 29 height above 5.10". Qualified working in Mumbai, for sankethi girl 25 years height 5.8" Shrivatsa gotra, Meena rashi (pieses) working 3 global services in U.K. based company, looking tall fair & slim.

Contact Tel.: 95251 - 2423482
Mobile : 093220 04711

# ವನಸುಮ

- ಕೀರ್ತಿನಾಥ ಕುರ್ತಕೋಟಿ

ಡಿ.ವಿ.ಜಿ.ಯವರ 'ನಿವೇದನ' ಎಂಬ ಕವಿತಾ ಸಂಕಲನ ೧೯೨೪ರಲ್ಲಿ ಪ್ರಕಟವಾಯಿತು. ಅದರಲ್ಲಿಯ ದೊಡ್ಡ ಕವಿತೆಗಳಿಗೆ ಒಂದು ಐತಿಹಾಸಿಕ ಹಿನ್ನೆಲೆ ಇದೆ. ರೈಟ್ ಆನರೆಬಲ್ ಶ್ರೀನಿವಾಸ ಶಾಸ್ತ್ರಿಗಳ ಜೊತೆಗೆ ಮೈಸೂರು ಸಂಸ್ಥಾನದಲ್ಲಿ ಸಂಚರಿಸಬೇಕಾಗಿ ಬಂದಾಗ ಬೇಲೂರು, ಶಿವನಸಮುದ್ರ, ಶ್ರವಣಬೆಳಗೊಳದಂಥ ಐತಿಹಾಸಿಕ ಮಹತ್ವವುಳ್ಳ ಸ್ಥಳಗಳ ಬಗ್ಗೆ ಬರೆದ ಕವಿತೆಗಳು ಇಲ್ಲಿ ಇವೆ. ಉದ್ದೇಶ ಐತಿಹಾಸಿಕವಾದದ್ದು. ಶ್ರೀನಿವಾಸ ಶಾಸ್ತ್ರಿಗಳಂಥ ಪ್ರಾಜ್ಞರೂ ಮತ್ತು ರಸಿಕರೂ ಆದ ವ್ಯಕ್ತಿಯೊಂದಿಗೆ ಈ ಸ್ಥಳಗಳನ್ನು ಸಂದರ್ಶಿಸಿದಾಗ ಹೊಸದಾಗಿ ಪಡೆದ ಸಂಸ್ಕೃತಿ ದರ್ಶನ ಈ ಕವಿತೆಗಳ ವಸ್ತುವಾಗಿದೆ. ಈ ಕವಿತೆಗಳ ಛಂದೋರಚನೆ ಹಳೆಯದು. ಕಂದಪದ್ಯ, ಸೀಸಪದ್ಯ ಮತ್ತು ಅಕ್ಷರ ವೃತ್ತಗಳನ್ನು ಇಲ್ಲಿ ಉಪಯೋಗಿಸಲಾಗಿದೆ. ಬೇಲೂರಿನ ಶಿಲಾಬಾಲಿಕೆಯರ ಬಗ್ಗೆ ಬರೆದ ಕವಿತೆಯಲ್ಲಿ ಕೀಟ್ಸ್‌ಕವಿಯ ಸೌಂದರ್ಯದರ್ಶನ ಸೇರಿಕೊಂಡದ್ದು ಹೊಸ ಅಂಶವಾಗಿದೆ. 'Heard melodies are sweet but those unheard are sweeter still' ಈ ಹೇಳಿಕೆಯ ಅರ್ಥವ್ಯಾಪ್ತಿ ಈ ಕವಿತೆಯ ಸಂದರ್ಭದಲ್ಲಿ ಬದಲಾಗಿದೆ. ಈ ಕವಿತೆಯ ಸೌಂದರ್ಯ ದರ್ಶನ ಪರಮಾತ್ಮನ ವಿಭೂತಿಯೊಂದಿಗೆ ಸಂಬಂಧವನ್ನಿಟ್ಟುಕೊಂಡಿದೆ: ತಮ್ಮ ಜೀವಮಾನದಲ್ಲಿ ಡಿ.ವಿ.ಜಿ.ಯವರು ಹುಡುಕುತ್ತಿದ್ದ ಅಸ್ಪೃಗಾನದ ಒಂದು ಅಲೆ ಇಲ್ಲಿ ಅವರಿಗೆ ಕೇಳಿಸಿದಂತಾಗಿರಬೇಕು.

'ನಿವೇದನ' ಸಂಕಲನದಲ್ಲಿ ಬೇರೆ ಬಗೆಯ ಕೆಲ ಕವಿತೆಗಳೂ ಇವೆ. ಡಿ.ವಿ.ಜಿ.ಯವರಲ್ಲಿ ಅಪರೂಪವಾಗಿರುವ ಆತ್ಮಾಭಿವ್ಯಕ್ತಿ ಇಲ್ಲಿಯ ಕವಿತೆಗಳಲ್ಲಿ ಕಾಣುತ್ತದೆ. ಇವುಗಳ ರಚನೆ ಹರಿದಾಸರ ಗೀತಗಳನ್ನೂ ನೆನಪಿಗೆ ತರುತ್ತದೆ. 'ನಿವೇದನ' ಎಂಬ ಕವಿತೆಯಲ್ಲಿ ಪ್ರಕೃತಿ ಮತ್ತು ಕಲೆ ಇವುಗಳಲ್ಲಿ ಅಭೇದವನ್ನು ಕಲ್ಪಿಸಲಾಗಿದೆ. ನಿಸರ್ಗವೆಂದರೆ ಪರಮಾತ್ಮನ ಕಲೆ ಎಂಬ ವಿಚಾರ ಇಲ್ಲಿ ಮುಖ್ಯವಾದದ್ದು. ಈ ವಿಚಾರ ಕುವೆಂಪುರವರಂಥವರ ಕವಿತೆಗಳಲ್ಲಿ ಕೂಡ ಪ್ರಮುಖವಾದ ವಿಚಾರವಾಗಿದೆ. ಸೌಂದರ್ಯವೆಂದರೆ ಕಲೆಯಲ್ಲಿ ಮಾತ್ರ ಕಾಣುವ ವಿಶೇಷವಾದ ಮೌಲ್ಯವಾಗಿರುವದರಿಂದ ನಿಸರ್ಗದ ಸೌಂದರ್ಯ ಕೂಡ ಪರಮಾತ್ಮನ ಕಲೆಯ ಒಂದು ಮೌಲ್ಯವೆಂದು ತಿಳಿದಿರುವದು ಸಹಜವಾಗಿದೆ. ಸೂರ್ಯನಿಗೆ ಬೆಳಕನ್ನು, ಗಾಳಿಗೆ ವೇಗವನ್ನು ಕೊಟ್ಟ ಪರಮಾತ್ಮನೇ ಕವಿಗೆ ಪ್ರತಿಭೆಯನ್ನು ಕೊಟ್ಟಿದ್ದಾನೆಂದು ಈ ಕವಿತೆಯಲ್ಲಿಯ ಮಾತು ಒಂದಿಷ್ಟು ಹೊಸದಾಗಿದೆ. ಒಂದು ದೃಷ್ಟಿಯಿಂದ ಇದು ಹಳೆ ಹೊಸದರ ಸಮನ್ವಯ. ಹಳೆಯ ಕವಿಗಳೂ ತಮ್ಮ ಕಾವ್ಯ ಶಕ್ತಿ ಪರಮಾತ್ಮನ ವರವೆಂದು ನಂಬಿದ್ದರು. ಆದರೆ ನಿಸರ್ಗ ಪರಮಾತ್ಮನ ಕಲೆ ಎಂಬಮಾತನ್ನು ಅವರು ಹೇಳಿರಲಿಲ್ಲ.

ಈ ಸಂಕಲನದಲ್ಲಿಯ 'ವನಸುಮ' ಎಂಬ ಕವಿತೆ ಡಿ.ವಿ.ಜಿಯವರ ಒಂದು ಪ್ರಖ್ಯಾತವಾದ ಕವಿತೆಯಾಗಿದೆ. ಕಾವ್ಯದ ಎಲ್ಲ ಪಠ್ಯಪುಸ್ತಕಗಳಲ್ಲಿಯೂ ಇದು ಕಾಣಿಸಿಕೊಂಡಿದೆ. ಈ ಕವಿತೆ ತಾನಾಗಿ ಹೇಳುವ ಮಾತುಗಳಲ್ಲಿ ಹೊಸದೇನೂ ಇಲ್ಲ. ಮನುಷ್ಯನ ಒಳ್ಳೆಯತನ ಒಂದು ಸಹಜಧರ್ಮವಾಗಬೇಕು. ಮನುಷ್ಯನಲ್ಲಿ ಅಹಂಭಾವ ಅಳಿದು ವಿನಯ ತಾನಾಗಿ ಮೈದೋರಬೇಕು ಎಂಬುದು ಈ ಕವಿತೆಯ ಭಾವ. ನಮ್ಮ ದಾಸರಲ್ಲಿ, ಶರಣರಲ್ಲಿ ಇಂಥ ವಿನಯದ ಅಭಿವ್ಯಕ್ತಿಬೇಕಾದಷ್ಟಿದೆ. ಆದರೆ ಡಿ.ವಿ.ಜಿ.ಯವರು ಉಪಯೋಗಿಸಿದ ವನಸುಮ ಮತ್ತು ಮತ್ತು ಗಿಡಗಳ ರೂಪಕ ಈ ಉದ್ದೇಶವನ್ನು ಪೂರ್ತಿ ಗೊಳಿಸುವದರ ಜತೆಗೆ ಇನ್ನಷ್ಟು ಅರ್ಥವಂತಿಕೆಯನ್ನು ಕವಿತೆಗೆ ಕೊಡುತ್ತವೆ. ಕಾಡಿನಲ್ಲಿ ಅರಳಿದ ಹೂವು ಯಾರ ಮೆಚ್ಚಿಗೆಯನ್ನೂ ಅಪೇಕ್ಷಿಸುವದಿಲ್ಲ. ಅರಳುವದು, ಕಂಪುಬೀರುವದು ಅದಕ್ಕೆ ಸಹಜದರ್ಮ. ಅದರಂತೆಯೇ ಗಿಡ ತಾನು ಬೆಳೆಯುತ್ತಿರುವಂತೆ ಪಕ್ಷಿಗೆ ವಿಪುಲಾಶ್ರಯವನ್ನೀಯುತ್ತದೆ, ಅದಕ್ಕೆ ಉಪಕಾರ ಮಾಡುವ ಪ್ರಜ್ಞೆಯಿಲ್ಲ ಎನ್ನುವ ಮಾತೂ ಕೂಡ ಅಹಂಭಾವದ ಭಾವನೆ ಸುಳಿಯದ ವ್ಯಕ್ತಿತ್ವದ ಪ್ರತೀಕವಾಗುತ್ತದೆ.

ಆದರೆ ವನಸುಮದ ವಿರಕ್ತತೆ ಬೇರೆ ಅರ್ಥವನ್ನೂ ಸೂಚಿಸುತ್ತದೆ. ಮನುಷ್ಯನ ಜೀವನ ಕಾಡ ಹೂವಿನಂತೆ ಮೌನವಾಗಿ ತನ್ನ ಸೌರಭವನ್ನು ಬೀರಬೇಕು ಎಂದರೆ ಹಳೆಯ ಕಾಲದ ಸನ್ಯಾಸಿಗಳ ಜೀವನ ನೆನಪಾಗುತ್ತದೆ. ಇದು ಕವಿಯ ಸ್ವಂತದ ಹಾರೈಕೆಯಾಗಿರುವದರಿಂದ ಕವಿಯ ಜೀವನದ ರೀತಿಗೂ ಕಾಡ ಹೂವಿನ ಜೀವನದ ರೀತಿಗೂ ಇರುವ ವ್ಯತ್ಯಾಸ ಪ್ರಮುಖವಾಗುತ್ತದೆ. ಡಿ.ವಿ.ಜಿ.ಯವರು ತಮ್ಮ ಜೀವಮಾನವೆಲ್ಲ ಬೆಂಗಳೂರಿನಂಥ ನಗರದಲ್ಲಿ ಕಳೆದವರು. ರಾಜಕೀಯ, ವ್ಯಾಪಾರ, ಉದ್ಯೋಗ, ಸಾಹಿತ್ಯದಂಥ ಚಟುವಟಿಕೆಗಳಿಂದ ತುಂಬಿದ ಜಗತ್ತಿನಲ್ಲಿ ಸಕ್ರಿಯವಾಗಿ ಭಾಗವಹಿಸಿದವರು. ಸದ್ದುಗದ್ದಲಗಳ ನಡುವೆಯೇ ಬದುಕಿದವರು. ಅನೇಕ ರಾಜಕೀಯ ಮತ್ತು ಸಾಮಾಜಿಕ ಸ್ಥಿತ್ಯಂತರಗಳನ್ನು ಅವರು ಕಂಡವರು. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ನಮ್ಮ ದೇಶದ ಜೀವನ ಪದ್ಧತಿ ಬದಲಾಗಿ ಹೋಗುತ್ತಿರುವಾಗ ಉತ್ಸಾಹವನ್ನೂ ಕಳವಳವನ್ನೂ ಒಟ್ಟಿಗೆ ಅನುಭವಿಸಿದವರು. ಅವರ ಜೀವನ ವಿಕಾಸದ ರೀತಿ ನಿಶ್ಚಿತವಾಗಿ ವನಸುಮದ ವಿಕಾಸದ ರೀತಿಯಲ್ಲ. ಧರ್ಮ, ಭಾಷೆ, ಕಲೆ, ಸಂಸ್ಕೃತಿ, ರಾಜಕೀಯ, ಅರ್ಥವ್ಯವಸ್ಥೆ, ಇತಿಹಾಸ ಇವುಗಳ ಬಗ್ಗೆ ಆಳವಾಗಿ ಯೋಚಿಸುತ್ತಿದ್ದ ಅವರಿಗೆ ವನಸುಮದ ಮೌನ, ಸದ್ದಿಲ್ಲದೆ ಕಂಪು ಬೀರುವ ವಿಧಾನ ಸಾಧಿಸಲೇ ಇಲ್ಲ. ಆದರೂ ಕವಿತೆಯಲ್ಲಿ ಅಂಥ ಒಂದು ಪ್ರಾರ್ಥನೆ ಇದೆ.

ಹಾಗೆಂದರೆ ಈ ಕವಿತೆ ಹೇಳುವದೆಲ್ಲ ಸುಳ್ಳು ಎಂದು ಇದರ ಅಭಿಪ್ರಾಯವಲ್ಲ. ಡಿ.ವಿ.ಜಿ. ಆತ್ಮ ವಿವಿಕ್ತತೆಯನ್ನು ಅನುಭವಿಸಿದವರು. ಗೌಡಪಾದರ 'ಮಾಂಡೂಕ್ಯಕಾರಿಕೆ'ಯಲ್ಲಿಯ ಶ್ಲೋಕಗಳನ್ನು ಅವರು ಉದಾಹರಿಸುತ್ತಲೇ ಇದ್ದರು. ಅವರಿಗೆ ಪ್ರಿಯವಾಗಿದ್ದ ಉಪನಿಷತ್ತುಗಳಲ್ಲಿ ಆತ್ಮದ ವಿವಿಕ್ತತೆಯನ್ನು ಬಿಟ್ಟರೆ ಬೇರೇನೂ ಇಲ್ಲ. 'ಆತ್ಮಾ ವಾ ಅರೇ ಮಂತವ್ಯಂ ಶ್ರೋತವ್ಯಂ ನಿಧಿಧ್ಯಾಸಿತವ್ಯಂ ಮೈತ್ರೇಯೀ' ಎಂಬ ಬೃಹದಾರಣ್ಯಕದ ಮಂತ್ರವೂ ಅವರಿಗೆ ಪ್ರಿಯವಾದದ್ದೇ. ಆತ್ಮದ ಈ ವಿವಿಕ್ತತೆಯನ್ನು ಅನುಭವಿಸುತ್ತ, ಅದನ್ನು ಧ್ಯಾನಿಸುತ್ತ ಬರೆದಿರಬಹುದಾದ ಕವಿತೆ ಇದಾಗಿದೆ. 'ವನಸುಮ'ದ ರೂಪಕದ ಅರ್ಥವನ್ನೆಲ್ಲ ಈ ಕವಿತೆ ಸೂರೆಗೈದಿದೆ ಎಂದು ಹೇಳುವದೂ ಸಾಧ್ಯವಿಲ್ಲ. ಈ ರೂಪಕದ ಒಂದು ಅರ್ಥ. ಪ್ರಸಿದ್ಧಿ ಪರಾಙ್ಮುಖತೆ ಮಾತ್ರ ಇಲ್ಲಿ ವ್ಯಕ್ತವಾಗಿದೆ. ಆದರೆ ಕವಿತೆ ತನಗೆ ಗೊತ್ತಾಗಿರುವ ಅರ್ಥವಷ್ಟನ್ನೇ ಪ್ರಕಟಿಸುವದಿಲ್ಲ. ತನಗೆ ಗೊತ್ತಿಲ್ಲದ, ತನಗಿಂತ ಇತರವಾದ, ಭಿನ್ನವಾದ ಅರ್ಥವನ್ನು ಕೂಡ ಒಂದು ರೂಪಕ ಧ್ವನಿಸಬಲ್ಲದು. ಡಿ.ವಿ.ಜಿ.ಯವರ ಅಜ್ಞಾತವಾದ ಚಿತ್ತವೃತ್ತಿಗೆ ಬೆಂಗಳೂರಿನ ಲಾಲ್‌ಬಾಗಿನಲ್ಲಿ ಅರಳಿದ ಸಾವಿರಾರು ನಾಗರಿಕ ಹೂವುಗಳಿಗಿಂತ 'ಕಾನನದಿ ಬಿರಿದು ಮೌನದಿಂ ನಿಜ ಸೌರಭವ ಬೀರುವ' ವನಸುಮ ಹೆಚ್ಚು ಅರ್ಥಪೂರ್ಣವಾಗಿ ಕಂಡಿತೆಂದು ಅದು ಈ ಕವಿತೆಯ ಕೇಂದ್ರ ಪ್ರತಿಮೆಯಾಯಿತು. ಯಾವದು ಪ್ರಕೃತಿ, ಯಾವದು ಸಂಸ್ಕೃತಿ ಎಂದು ಜೀವಮಾನವೆಲ್ಲ ಯೋಚಿಸಿದರೂ, ಹೊಳೆಯದ ಅರ್ಥವನ್ನು, ಆ ವನಸುಮದ ಪ್ರತೀಕ ತನ್ನ ಕಾವ್ಯ ಸಂದರ್ಭದಲ್ಲಿ ತಟ್ಟನೆ ಹೊಳೆಯಿಸಿ ಬಿಡುತ್ತದೆ. ಪ್ರಕೃತಿ ಸಂಸ್ಕೃತಿಯಾಗುವದು ದಿನನಿತ್ಯದ ವ್ಯಾಪಾರ. ಆದರೆ ಸಂಸ್ಕೃತಿ ಪ್ರಕೃತಿಯಾಗಬೇಕಾದರೆ ಜನ್ಮಾಂತರಗಳ ದುಡಿತದಿಂದ ಮಾತ್ರ ಸಾಧ್ಯ. ತಮ್ಮ ಹರೆಯದಲ್ಲಿಯೇ ಡಿ.ವಿ.ಜಿ.ಯವರು ಈ ಅಪರೂಪದ ಕನಸನ್ನು ಕಂಡಿರಬೇಕು.

(ಕೃಪೆ : ನೂರುಮರ ನೂರು ಸ್ವರ)

# ಡಿ.ವಿ.ಜಿ. ಬದುಕು ಬರಹ

- ಎಸ್. ಆರ್. ರಾಮಸ್ವಾಮಿ

"ಒಲವೇಂ, ಸಂಭ್ರಮವೇಂ, ಪ್ರಿಯಾಭಿಸರಮೇಂ ಲಾವಣ್ಯಮೇಂ ಲೀಲೆಯೇಂ... ಬಲಮಂ ತೋರುವ ಕೇವಿಯೇಂ, ಚಪಲಮೇಂ...", ಎಂದು ಕಾವೇರಿ ನದೀಸ್ರೋತದ ವಿಜಂಭಣೆಯನ್ನು ವರ್ಣಿಸಿದವರು, ಡಿ.ವಿ.ಜಿ. ಅವರ ಬಹುಮುಖ ಸಾಧನೆಯನ್ನು ನೆನೆಯುವಾಗ ನಮ್ಮಲ್ಲುಂಟಾಗುವುದೂ ಅಂಥದೇ ಭಾವನೆ, ರೋಮಾಂಚನ. ಪಾಂಡಿತ್ಯ-ಸಹೃದಯತೆ, ದಾರ್ಶನಿಕತೆ- ಲೌಕಿಕಾಸಕ್ತಿ, ವೈಚಾರಿಕತೆ-ಪರಂಪರಾಶ್ರದ್ಧೆ, ಪ್ರತಿಭೆ-ಪರಿಶ್ರಮ ಈ ವಿವಿಧ ಗುಣಗಳ ಸಮನ್ವಯವನ್ನು ಡಿ.ವಿ.ಜಿ.ಯಂತೆ ಮೆರೆದವರು ವಿರಳ. ಸಮಾಜಸೇವೆ, ರಾಜಕೀಯ ಚರ್ಚೆಗಳಲ್ಲಿಯೂ, ಪತ್ರಿಕೋದ್ಯಮದಲ್ಲಿಯೂ ಅವರು ಮಾಡಿದ ಪರಿಶ್ರಮ ಅವರ ಸಾಹಿತ್ಯಕ ಪರಿಶ್ರಮಕ್ಕಿಂತ ಬಹುಪಾಲು ಮಿಗಿಲಾಗಿದ್ದು ಮತ್ತು ಅವರನ್ನು ಕುರಿತು ಚಿಂತಿಸುವಾಗ ಜೀವನ ಕ್ಷೇತ್ರಗಳನ್ನು ಹೀಗೆ ವಿಂಗಡಿಸುವುದು ಕೃತಕವೆನಿಸುತ್ತದೆ. ತಮ್ಮ 'ಶ್ರೀ ಕೃಷ್ಣ ಪರೀಕ್ಷಣಂ' ಕೃತಿಯಲ್ಲಿ ಡಿ.ವಿ.ಜಿ.ಯವರೇ ಹೇಳಿದ ಈ ಮಾತುಗಳು ಅವರ ಜೀವನ ರೀತಿಯನ್ನು ಸಂಗ್ರಹಿಸುತ್ತವೆನ್ನಬಹುದು.

ಜೀವಕೆ ಸಂಸ್ಕಾರದ್ವಯಮಾವಶ್ಯಕಮಾತ್ಮಪದವ
ಪಡೆವೊಡೆ ಪುರುಷಂ ಗೀವ್ಯವಸಾಯಂ ತತ್ಸಕೆ
ಭಾವಪರಿಷ್ಕರಣ ಲೋಕಸಂಪರ್ಕಗಳಿಂ
ಅತ್ತಲ್ ಬುದ್ಧಿವಿಚಾರಮು
ಮಿತ್ತಲ್ ಲೋಕಪ್ರಸಕ್ತ ಹೃದ್ವಿಕಸನಮುಂ
ಯುಕ್ತಮಿಹಾ ಸಂಸ್ಕಾರದಿ
ನಾತ್ಮದ ಸಾರ್ವತ್ರಿಕತ್ವಮನುಭವಮಕ್ಕುಂ
ಮತಿ-ಮನಗಳ ದಾಂಪತ್ಯ

ಸಾಮಾಜಿಕ ಜೀವನ, ಸಾಹಿತ್ಯ ವ್ಯವಸಾಯ ಹೇಗೆ ಒಂದಕ್ಕೊಂದು ಪೂರಕವಾಗಿದ್ದವೋ ಹಾಗೆಯೇ ಶಾಸ್ತ್ರ ಪಾಂಡಿತ್ಯ, ಕಾವ್ಯ ರಸಿಕತೆಗಳೂ ಅವರಲ್ಲಿ ಅಭಿನ್ನವಾಗಿ ಮನೆಮಾಡಿದ್ದವು. ಶ್ರೀಮದ್ ಭಗವದ್ಗೀತಾ ತಾತ್ಪರ್ಯ ಗ್ರಂಥದಲ್ಲಿ ಗೀತೆಯ ಗೇಯಗುಣವನ್ನು ಪ್ರಸ್ತಾಪಿಸುತ್ತ ಡಿ.ವಿ.ಜಿ. ಹೇಳಿರುವ ಮಾತುಗಳು ಮನನೀಯ.

ಸತ್ಯಾನ್ವೇಷಣೆ ಶಾಸ್ತ್ರಂ
ಹೃತ್ತೋಷಣೆ ಕಾವ್ಯಂ, ಅಂತು-ಮತಿ ಮನಗಳ ದಾಂ
ಪತ್ಯದ ಫಲಮಧಿರಸರುಚಿ
ಯಾತ್ಮಾನಂದಮದು ಶಾಸ್ತ್ರಕಾವ್ಯಾನುಭವಂ

ಸಾಹಿತ್ಯ ಪ್ರಸಾದ ಜನದ ತಪಸ್ಸಿಗೆ ಪ್ರತ್ಯುತ್ತರ ಎಂದು ಸೂಚಿಸಿದ ಡಿ.ವಿ.ಜಿ. ಜನತೆಯಲ್ಲಿರಬೇಕಾದ ತಪೋನಿಷ್ಠೆಯಲ್ಲಿ ಮೂರು ಅಂಶಗಳನ್ನು ಗುರುತಿಸಿದ್ದಾರೆ.

(1) ಲೋಕವಸ್ತು ಪರಿಜ್ಞಾನ
(2) ವಿಮರ್ಶನ ಜಾಗರೂಕತೆ
(3) ಪರಮಾರ್ಥದ ದೃಷ್ಟಿ (ಐಡಿಯಲಿಸ್ಟ್)

ರಾಷ್ಟ್ರಕತೆ-ಸಾಹಿತ್ಯ ಕಾರ್ಯಗಳು ಡಿ.ವಿ.ಜಿ. ಯವರಲ್ಲಿ ಸಮನ್ವಿತವಾದದ್ದು ಈ ಸೂತ್ರದ ಆಧಾರದ ಮೇಲೆ. "ಯಾವ ವಸ್ತುಸೌಂದರ್ಯ, ಗುಣಸೌಂದರ್ಯಗಳಿಂದ ಕವಿಯ ನಿರ್ಮಿತಿ ನಮಗೆ ಆನಂದದಾಯಕವಾಗಿರುತ್ತದೆಯೋ... ಆ ದಿವ್ಯ ಸೌಂದರ್ಯಗಳನ್ನು, ಆ ತೇಜಸ್ಸುಗಳನ್ನು ಜನತೆಯ ನಿತ್ಯ ಜೀವನದಲ್ಲಿ ಯತ್ಕಿಂಚಿತ್ತಾದರೂ ಪುನರೂಪಕ್ಕೆ ತರುವುದು ರಾಜ್ಯಕರ್ಮಿಯ ಪ್ರಯತ್ನ... ಈ ಚಿಂತನೆಯ ಸವಿಸ್ತರ ಮಂಡನೆಯನ್ನು ಡಿ.ವಿ.ಜಿ.ಯವರ ಉಪನ್ಯಾಸ ಸಂಗ್ರಹಗಳಾದ 'ಜೀವನ ಸೌಂದರ್ಯ ಮತ್ತು ಸಾಹಿತ್ಯ' (1932), 'ಸಾಹಿತ್ಯ ಶಕ್ತಿ' (1950) ಮತ್ತು ಕಾವ್ಯಸ್ವಾರಸ್ಯ (1975) ಕೃತಿಗಳಲ್ಲಿ ಕಾಣುತ್ತೇವೆ.

ದೀರ್ಘ ಕಾಲ ಶಾಸನ ಪರಿಷತ್ತಿನ ಸದಸ್ಯರಾಗಿ (1927-40), ಪೌರಸಭಾ ಸದಸ್ಯರಾಗಿ, ಮೈಸೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ(1927-43), ಮೈಸೂರು ರಾಜ್ಯ ನಿಬಂಧನ ಸುಧಾರಣೆ ಸಮಿತಿ ಮತ್ತಿತರ ತಜ್ಞ ಸಮಿತಿಗಳಲ್ಲಿ ಡಿ.ವಿ.ಜಿ. ಸಲ್ಲಿಸಿದ ಸೇವೆ ಇದೇ ಉದಾತ್ತ ರಾಷ್ಟ್ರನಿಷ್ಠೆಯಿಂದ ಪ್ರೇರಣೆ ಪಡೆದದ್ದು. ಡಿ.ವಿ.ಜಿ. ತಮ್ಮ ಜೀವನಕ್ಕೆ ತೋರುಬೆರಳಾಗಿ ಇರಿಸಿಕೊಂಡು ಮೇಲಿಂದ ಮೇಲೆ ಸ್ಮರಿಸುತ್ತಿದ್ದ:

ಜ್ಞಾನಿನಾ ಚರಿತುಂ ಶಕ್ಯಂ
ಸಮ್ಯಗ್ ರಾಜ್ಯಾದಿ ಲೌಕಿಕಮ್
(ಜ್ಞಾನಿಯನಕ್ಕುಂ ಹಿತಸಂ
ಧಾನಂ ರಾಜ್ಯಾದಿ ಲೌಕಿಕವ್ಯವಹೃತಿಯೋಳ್)

ಎಂಬ ವಿದ್ಯಾರಣ್ಯ ವಚನವೂ, "ಸಾರ್ವಜನಿಕ ಜೀವನವನ್ನು ಧರ್ಮಮಯವನ್ನಾಗಿಸಬೇಕು" ಎಂಬ ಗೋಪಾಲಕೃಷ್ಣ ಗೋಖಲೆಯವರ ಆದರ್ಶವೂ ಡಿ.ವಿ.ಜಿ. ಯವರ ಜೀವಿತ ಸಾಧನೆಯನ್ನು ಅರಿಯಲು ಕೈಮರಗಳಾಗಿವೆ. ತಾವು ಪ್ರಧಾನವಾಗಿ ಪತ್ರಿಕೋದ್ಯಮಿಗಳೆಂದು ಕರೆದುಕೊಳ್ಳುತ್ತಿದ್ದುದು ಡಿ.ವಿ.ಜಿ. ಯವರ ರೂಢಿ. ಅವರ ಬೌದ್ಧಿಕ ಪರಿಶ್ರಮದ ಬಹುಪಾಲು ಅಭಿವ್ಯಕ್ತಗೊಂಡಿದ್ದು, ಸಾಹಿತ್ಯ ಕೃತಿಗಳಿಗಿಂತ ಹೆಚ್ಚಾಗಿ ಅವರು ದಶಕಗಳುದ್ದಕ್ಕೂ ನಡೆಸಿದ ಒಂದಲ್ಲ ಒಂದು ಪತ್ರಿಕೆಯ ಮೂಲಕ. ಪತ್ರಿಕಾಕ್ಷೇತ್ರದ ಅವರ ಜೀವನಾನುಭವಗಳನ್ನೂ ಅವರ ದೃಗ್ರೀತಿಯನ್ನೂ "ವೃತ್ತಪತ್ರಿಕೆ" (1928, 1968) ಗ್ರಂಥದಲ್ಲಿ ಕಾಣಬಹುದು.

### ಪತ್ರಿಕಾವೃತ್ತಿ

1906-07ರ ಸುಮಾರಿಗೆ ಆರಂಭವಾದದ್ದು ಡಿ.ವಿ.ಜಿ.ಯವರ ಪತ್ರಿಕಾವೃತ್ತಿ. ಆಗಿನ 'ಸೂರ್ಯೋದಯ ಪ್ರಕಾಶಿಕಾ', 'ಮೈಸೂರು ಸ್ಟಾಂಡರ್ಡ್', 'ಈವ್‌ನಿಂಗ್ ಮೈಲ್', ಮೈಸೂರು ಟೈಮ್ಸ್' ಪತ್ರಿಕೆಗಳ ಆಶ್ರಯದಲ್ಲಿ ಒಂದೆರಡು ವರ್ಷಗಳಲ್ಲಿ ನವರತ್ನ ಕೃಷ್ಣಸ್ವಾಮಿಯವರೊಡನೆ 'ಭಾರತಿ' ಎಂಬ ದಿನಪತ್ರಿಕೆಯೊಂದನ್ನು ತಾವೇ ಹೊರಡಿಸುವ ಸಾಹಸ ಮಾಡಿದರು. 1908ರಲ್ಲಿ ಪತ್ರಿಕಾ ವಾಗ್ಬಂಧನ ಜಾರಿಯಾದಾಗ ಮದರಾಸಿಗೆ ವಲಸೆ ಹೋಗಿ ಅಲ್ಲಿ 'ಹಿಂದೂ' 'ಇಂಡಿಯನ್ ಪೇಟ್ರಿಯಟ್' ಮುಂತಾದ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯತೊಡಗಿದರು.

ಬೆಂಗಳೂರಿಗೆ ವಾಪಸ್ಸು ಬಂದು ನಂತರ 1913ರಲ್ಲಿ 'ಕರ್ನಾಟಕ' ಅರ್ಧವಾರಪತ್ರಿಕೆಯನ್ನು

## ಡಿ.ವಿ.ಜಿ. ಜೀವನ ಪಥ

| | |
|---|---|
| 1887 | : ಜನನ, ಕೋಲಾರ ಜಿಲ್ಲೆಯ ಮುಳಬಾಗಿಲು |
| 1908 | : ಭಾರತಿ ದಿನ ಪತ್ರಿಕೆಗೆ ಸಹ ಸಂಪಾದಕ |
| 1912 | : ಬೆಂಗಳೂರು ನಗರ ಸಭೆಗೆ ನಾಮಕರಣ |
| 1915 | : ಗೋಖಲೆ ಲೀಗ್ ಸ್ಥಾಪನೆ |
| 1926-40 | : ಮೈಸೂರು ನ್ಯಾಯವಿಧಾಯಕ ಸಭೆಯ ಸದಸ್ಯ |
| 1932 | : ಮಡಿಕೇರಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ |
| 1934-37 | : ಕ.ಸಾ.ಪ.ದ ಉಪಾಧ್ಯಕ್ಷ |
| 1935 | : ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಸ್ಥಾಪನೆ |
| 1961 | : ಮೈಸೂರು ವಿವಿ ಗೌರವ ಡಿಲಿಟ್ |
| 1967 | : ಶ್ರೀ ಮದ್ಭಗವದ್ಗೀತಾ ತಾತ್ಪರ್ಯ ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |
| 1974 | : ಭಾರತ ಸರಕಾರದ ಪದ್ಮಭೂಷಣ |
| ನಿಧನ | : 1975 ಅಕ್ಟೋಬರ್ 7 |

ಆರಂಭಿಸಿ ಏಳೆಂಟು ವರ್ಷ ನಡೆಸಿದರು. ಒಂದೆರಡು ವರ್ಷಗಳ ಬಿಡುವಿನ ನಂತರ 'ಇಂಡಿಯನ್ ರೆವ್ಯೂ' ಆಫ್ ರೆವ್ಯೂಸ್ ಇಂಗ್ಲಿಷ್ ಮಾಸಪತ್ರಿಕೆಯನ್ನು 1921 ಆಗಸ್ಟ್‌ನಲ್ಲಿ ಆರಂಭಿಸಿದರು. ಅದರ ಧ್ಯೇಯಘೋಷಣೆ ಹೀಗಿತ್ತು: ''ರಾಷ್ಟ್ರಕ ಜೀವನ ಜಟಿಲವಾಗಿ ಇಂದು ವಿಧ ವಿಧವಾದ ನೂತನ ಸಮಸ್ಯೆಗಳು ಹುಟ್ಟಿಕೊಂಡಿವೆಯಾದ್ದರಿಂದ, ತತ್ಸಂಬಂಧದ ಸಾಹಿತ್ಯವೂ ಬಹುಗುಣವಾಗಿ ಬೆಳೆಯುತ್ತಿದೆ. ಹತ್ತಾರು ಪತ್ರಿಕೆಗಳಲ್ಲಿ ಪ್ರಕಟವಾಗುವ ಲೇಖನಗಳ ಸಾರಸಂಗ್ರಹವೊಂದರ ಅಗತ್ಯವಿದೆ. ಸಮಕಾಲೀನ ಚರಿತ್ರೆಗೆ ಅಂಥ ಒಂದು ಕೈಪಿಡಿಯನ್ನು ಒದಗಿಸುವ ಕರ್ತವ್ಯವನ್ನು 'ಇಂಡಿಯನ್ ರೆವ್ಯೂ ಆಫ್ ರೆವ್ಯೂಸ್' ಪತ್ರಿಕೆಯು ಯಾವ ವಿಶಿಷ್ಟ ಪಕ್ಷ ವಿಶ್ವಾಸವೂ ಇಲ್ಲದೆ ನಿರ್ವಹಿಸ ಹೊರಟಿದೆ. ಆದರೆ ಹಾಗೆಂದ ಮಾತ್ರಕ್ಕೆ ಈ ಪತ್ರಿಕೆಗೆ ಯಾವ ವಿಶಿಷ್ಟ ಸಂಪಾದಕೀಯ ನೀತಿ ಧೋರಣೆಯೂ ಇಲ್ಲವೆಂದು ಅರ್ಥ ಮಾಡಬೇಕಾದದ್ದಿಲ್ಲ...''

1923ರಿಂದಾಚೆಗೆ ಡಿ.ವಿ.ಜಿ. ನಡೆಸಿದ ಪತ್ರಿಕೆ ಕರ್ನಾಟಕ ಜನ ಜೀವನ ಮತ್ತು ಅರ್ಥ ಸಾಧಕ ಪತ್ರಿಕೆ. 1945ರಲ್ಲಿ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಪುನರ್ಜನ್ಮ ಪಡೆದಾಗಿನಿಂದ ತಮ್ಮ ಅವಸಾನದವರೆಗೆ (1975) ಡಿ.ವಿ.ಜಿ. ಆ ಸಂಸ್ಥೆಯ ಅಂಗಪತ್ರಿಕೆ 'ಪಬ್ಲಿಕ್ ಅಫೇರ್ಸ್' ಮೂಲಕ ಸಮಕಾಲೀನ ರಾಜಕೀಯ ವಿದ್ಯಮಾನಗಳನ್ನು ಕುರಿತಾಗಿ ಸತತವಾಗಿ ವ್ಯಾಖ್ಯೆ ನೀಡಿದರು. ತಮ್ಮದೇ ಪತ್ರಿಕೆ ಇಲ್ಲದಿದ್ದಾಗಲೂ ಡಿ.ವಿ.ಜಿ. ವಿರಮಿಸಿದವರಲ್ಲ. ಹಿಂದೂ ಮುಂತಾದ ಪ್ರತಿಷ್ಠಿತ ಪತ್ರಿಕೆಗಳ ಮೂಲಕ ತಮ್ಮ ಟೀಕೆಗಳನ್ನು ನಿರಂತರ ಪ್ರಕಟಿಸಿದರು. ಇವಲ್ಲದೆ ಸಾಮಾಜಿಕ ರಾಜಕೀಯ ವಿಷಯಗಳನ್ನು ಕುರಿತು ಪ್ರತ್ಯೇಕ ಪುಸ್ತಿಕೆಗಳನ್ನು ಆಗಿಂದಾಗ ಹೊರ ತಂದರು. ಸರ್ ಕೆ. ಶೇಷಾದ್ರಿ ಅಯ್ಯರ್, (1916), ಶಿವಾಭಿನವ ನೃಸಿಂಹ ಭಾರತೀ ಸ್ವಾಮಿಗಳು (1917), 'ಟಾಲ್‌ಸ್ಟಾಯ್' (1917), 'ಹಿಂದೂ ಧಾರ್ಮಿಕ ಸಂಸ್ಥೆಗಳ ಸುಧಾರಣೆ' (1923) 'ಭಾರತಕ್ಕೆ ಡೊಮಿನಿಯನ್ ಸಂವಿಧಾನದ ಅನ್ವಯ' (1929) ಇಂಥ ಹತ್ತಾರು ಕಿರು ಪುಸ್ತಕಗಳು ಸಮಕಾಲೀನ ಇತಿಹಾಸ ರಚಿಸಬಯಸುವವರಿಗೆ ಇಂದಿಗೂ ಅತ್ಯುಪಯುಕ್ತವಾಗಬಲ್ಲ ಸಾಮಗ್ರಿ. ಅಂತೆಯೇ ಸಾರ್ವಜನಿಕ ಜೀವನದಲ್ಲಿರುವ ಎಲ್ಲರಿಗೂ ಅಧ್ಯಯನಯೋಗ್ಯವಾದ ಶಾಸ್ತ್ರಗ್ರಂಥಗಳು 'ರಾಜ್ಯಶಾಸ್ತ್ರ' (1951) 'ರಾಜ್ಯಾಂಗ ತತ್ವಗಳು' (1954), ರಾಜಕೀಯ ಪ್ರಾಸ್ತಾವಿಕ ಉಪನ್ಯಾಸ ಸಂಗ್ರಹ 'ರಾಜಕೀಯ ಪ್ರಸಂಗಗಳು' (1958)

### ಸಂವಿಧಾನ ತಜ್ಞ

ದೇಶೀಯ ಸಂಸ್ಥಾನಗಳ ವಿಶಿಷ್ಟ ಸಮಸ್ಯೆಗಳನ್ನು ಕುರಿತು ಅಧಿಕಾರಯುತವಾಗಿ ಮಾತನಾಡಬಲ್ಲ ಭಾರತೀಯರಲ್ಲಿ ಅಗ್ರಪಂಕ್ತಿಯವರೆಂದು ಡಿ.ವಿ.ಜಿ. 1914-15ರ ವೇಳೆಗೆ ವಿಶಾಲ ಮನ್ನಣೆಗಳಿಸಿಕೊಂಡಿದ್ದರು. ಈ ವಿಷಯದ ವಿವಿಧ ಮುಖಗಳನ್ನು ಕುರಿತ ಅವರ ಬರಹಗಳು ಪ್ರೊ. ಬೆರ್ರಿಡೇಲ್ ಕೀತ್ ಮೊದಲಾದ ಜಗದ್ವಿಖ್ಯಾತ ರಾಜ್ಯ ಶಾಸ್ತ್ರಜ್ಞರ ಹಾಗೂ ಸರ್ ಪಿ.ಎಸ್. ಶಿವಸ್ವಾಮಿ ಅಯ್ಯರ್ ಮೊದಲಾದ ಭಾರತೀಯ ಸಂವಿಧಾನತಜ್ಞರ ಗಮನವನ್ನೂ ಸೆಳೆದಿದ್ದವು. ದೇಶೀಯ ಸಂಸ್ಥಾನ ಪ್ರಜೆಗಳ ಸಮ್ಮೇಳನವೊಂದು 1929ರಲ್ಲಿ ತಿರುವಾಂಕೂರಿನಲ್ಲಿ ನಡೆದಾಗ ಅದರ ಅಧ್ಯಕ್ಷರಾಗಿದ್ದ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಡಿ.ವಿ.ಜಿ.ಯವರನ್ನು ಕಾರ್ಯದರ್ಶಿಯಾಗಿ ನೇಮಿಸಿಕೊಂಡಿದ್ದರು. 1918ರಲ್ಲಿ ಮುಂಬೈನಲ್ಲಿ ನಡೆದ ಕಾಂಗ್ರೆಸ್ಸಿನ ವಿಶೇಷಾಧಿವೇಶನದಲ್ಲಿ ಡಿ.ವಿ.ಜಿ.ಯವರು ದೇಶೀಯ ಸಂಸ್ಥಾನಗಳ ಸ್ಥಿತಿಗತಿ ಬಗೆಗೆ ನಿರ್ಣಯವೊಂದನ್ನೂ ಮಂಡಿಸಿದ್ದರು. ಅಲ್ಲಿಂದಾಚೆಗೆ 1928ರಲ್ಲಿ ಬಟ್ಲರ್ ಆಯೋಗಕ್ಕೆ, 1942ರಲ್ಲಿ ಕ್ರಿಪ್ಸ್ ಆಯೋಗಕ್ಕೆ, 1945ರಲ್ಲಿ ಸಪ್ರು ಸಮಿತಿಗೆ ಇಂಥ ನಾಲ್ಕಾರು ಸಂದರ್ಭಗಳಲ್ಲಿ ಡಿ.ವಿ.ಜಿ. ಸಲ್ಲಿಸಿದ ಮನವಿಗಳು ಉಲ್ಲೇಖನೀಯ.

### ಸಾಮಾಜಿಕ ಸಂಘಟನೆಗಳಲ್ಲಿ

ಬರಿಯ ವಿದ್ವತ್ಕಾರ್ಯಕ್ಕೇ ತಮ್ಮನ್ನು ಮೀಸಲಾಗಿರಿಸಿ ಕೊಂಡವರಲ್ಲ ಡಿ.ವಿ.ಜಿ. ತಮ್ಮ ಧ್ಯೇಯಗಳ ಪ್ರವರ್ತನೆಗಾಗಿ ಅನೇಕ ಸಂಘ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದರು. 1915ರ ಸುಮಾರಿಗೆ ಸೋಷಲ್ ಸರ್ವೀಸ್ ಲೀಗ್ 'ಪಾಪ್ಯುಲರ್ ಎಜುಕೇಶನ್ ಲೀಗ್' ಮುಂತಾದ ಸಾಮಾಜಿಕ ಸಂಘಟನೆಗಳನ್ನು ಹುಟ್ಟು ಹಾಕಿದ್ದರು. ಈ 'ಸೋಷಲ್‌ಸರ್ವೀಸ್ ಲೀಗ್' ಸಂಘಟನೆಯೇ ಆ ಮೇಲಿನ ವರ್ಷಗಳಲ್ಲಿ 'ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ'ಯಾಗಿ ಮರುಜನ್ಮ ಪಡೆಯಿತು. ಉತ್ತಮ ರಾಷ್ಟ್ರದ ಪ್ರಜೆಗಳಾಗಲು ಜನತೆಗೆ ಶಿಕ್ಷಣ ನೀಡುವುದಕ್ಕಾಗಿ ಸಾರ್ವಜನಿಕ ಸಮಸ್ಯೆಗಳ ನಿಷ್ಪಕ್ಷಿಕ ಅಧ್ಯಯನಕ್ಕೂ ಮಾಧ್ಯಮವಾಗಿ ಈ ಸಂಸ್ಥೆಯು ಇಂದಿಗೂ ಕಾರ್ಯಪ್ರವೃತ್ತವಾಗಿದೆ.

ಕರ್ನಾಟಕ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ (1933-37) ಡಿ.ವಿ.ಜಿ. ಆ ಸಂಸ್ಥೆಯ ಕಾರ್ಯ ವಿಸ್ತರಣೆಗೆ ಕಾರಣರಾದರು. ವಸಂತ ('ವಿಶೇಷ') ಸಾಹಿತ್ಯೋತ್ಸವ, ಕನ್ನಡ ಶಿಕ್ಷಕರಿಗೆ ತರಬೇತಿ ಶಿಬಿರ, ಗಮಕ ತರಗತಿಗಳು ಮುಂತಾದ ಹಲವಾರು ಚಟುವಟಿಕೆಗಳ ಉಪಕ್ರಮವಾದದ್ದು ಡಿ.ವಿ.ಜಿ.ಯವರ ಉತ್ಸಾಹದ ಫಲವಾಗಿ. ಕರ್ನಾಟಕ ವೃತ್ತ ಪತ್ರಿಕಾ ಕರ್ತರ ಸಂಘ , ಶೀಘ್ರಲಿಪಿ ಬರಹಗಾರರ ಸಂಘ, ಪಂಡಿತ ಮಂಡಲಿ, ರಾಮಾಯಣ ಪ್ರಕಾಶನ ಸಮಿತಿ, ರಾಮಾಯಣ ಮಹಾಭಾರತಾದಿ ಪ್ರಕಾಶನ ಸಮಿತಿ ಮೊದಲಾದ ವಿವಿಧ ಗೋಷ್ಠಿಗಳಿಗೂ ಡಿ.ವಿ.ಜಿ.ಯವರಿಂದ ಆರೈಕೆ ದೊರೆತಿತ್ತು.

**ಎರಡು ಜೀವನ ಚರಿತ್ರೆಗಳು :** ಹೀಗೆ ಬಿಡುವಿಲ್ಲದ ಸಾರ್ವಜನಿಕ ಜೀವನದ ಚಟುವಟಿಕೆಗಳ ನಡುನಡುವೆಯೇ ಹೊರಬಂದವು ಡಿ.ವಿ.ಜಿಯವರ ಸಾಹಿತ್ಯಕೃತಿಗಳು.

''ಉತ್ತಮ ರಾಜ್ಯ ವ್ಯವಸ್ಥೆಯ ಲಕ್ಷಣಗಳು, ರಾಜ್ಯ ಸೇವೆಯ ವಿಧಾನಗಳು, ಪ್ರಜಾ ಜೀವನದ ಉತ್ಕೃಷ್ಟ ಗತಿ - ಇವೇ ಮೊದಲಾದ ಪ್ರಜಾ ಧರ್ಮದ ಮುಖ್ಯಾಂಶಗಳನ್ನು'' ನಿದರ್ಶನ ಪಡಿಸಲು 'ದಿವಾನ್ ರಂಗಾಚಾರ್ಲು' (1911) ಜೀವನಚರಿತ್ರೆಯನ್ನು ಬರೆದುದಾಗಿ ಡಿ.ವಿ.ಜಿ. ಹೇಳಿದ್ದಾರೆ. ಅವರು ಬರೆದ ಇನ್ನೊಂದು ಜೀವನಚರಿತ್ರೆ 'ಗೋಪಾಲ ಕೃಷ್ಣ ಗೋಖಲೆ' (1915). ''ಜನರಿಗೆ ಬದುಕು ಸಹ್ಯವೂ ಪ್ರಿಯವೂ ಅರ್ಥಪೂರಿತವೂ ಆಗಬೇಕೆಂಬ ಮಹೋದ್ದೇಶಕ್ಕೆ ರಾಜ್ಯಾಧಿಕಾರವನ್ನು ಸಾಧನವನ್ನಾಗಿ ಉಪಯೋಗಿಸಿ ಕೃತಕೃತ್ಯರಾದವರು ರಂಗಾಚಾರ್ಯರು. ಅದೇ ಉದ್ದೇಶವನ್ನೇ ಸಾರ್ವಜನಿಕ ಕ್ಷೇತ್ರದೊಳಗಿಂದ ಸಾಧಿಸಲು ಶ್ರಮಿಸಿದವರು ಗೋಪಾಲಕೃಷ್ಣ ಗೋಖಲೆಯವರು. ಅವರಿಬ್ಬರೂ ಪರಸ್ಪರ ಪೂರ್ಣಕಾರಿಗಳು. ರಂಗಾಚಾರ್ಯರು ಬಯಸುತ್ತಿದ್ದಂತಹ ಆದರ್ಶ ಪ್ರಜಾ ಪ್ರತಿನಿಧಿ ಗೋಖಲೆ; ಗೋಖಲೆಯವರು ಬಯಸುತ್ತಿದ್ದಂತಹ ಆದರ್ಶ ಮಂತ್ರಿ ರಂಗಾಚಾರ್ಯರು''

ಜೀವನಚರಿತ್ರೆ, ತತ್ವಚಿಂತನೆ, ರಾಜ್ಯವಿಷಯಕ ಪ್ರಸಂಗಗಳು, ಕಾವ್ಯ, ಗೇಯ ಪ್ರಬಂಧ ನಾಟಕ, ಸಂಸ್ಕೃತಿದರ್ಶನ, ದಾರ್ಶನಿಕ ಜಿಜ್ಞಾಸೆ, ಆಧ್ಯಾತ್ಮ ಪ್ರತಿಪಾದನೆ ಈ ನಾಲ್ಕಾರು ಸಾಹಿತ್ಯ ಪ್ರಕಾರಗಳ ಕೃತಿಗಳನ್ನು ವಿಪುಲ ಸಂಖ್ಯೆಯಲ್ಲಿ ಡಿ.ವಿ.ಜಿ. ಕನ್ನಡನಾಡಿಗೆ ನೀಡಿದ್ದಾರೆ. 'ಸಾಹಿತ್ಯ ಶಕ್ತಿ' 1950 ಪ್ರಬಂಧ ಸಂಕಲನದ ಆರಂಭದಲ್ಲಿ ಅವರು ಹೇಳಿರುವ ಮಾತು ಅವರ ವ್ಯಕ್ತಿತ್ವದ ಮೇಲಣ ವ್ಯಾಖ್ಯೆಯೂ ಆಗಿದೆಯೆನ್ನಬಹುದು.

ರಾಮಣೀಯಕವೆಂದು ಬಿಸುಸುಯ್ಯಲದು ಕವಿದೆ
ಭೂಮಿಗದನೆಟುಕಿಸುವೆನೆಂಬೆಸಕ ರಾಷ್ಟ್ರಕತೆ
ಅಮೂಲಮದರರಿವನ್ ಅರಸಲ್ ಅದು ವಿಜ್ಞಾನ
ಸಾಮಗ್ರ್ಯದಿಂ ಕಾಣಲ್ ಅದುವೆ ದಿವ್ಯಜ್ಞಾನ

### ಕಾವ್ಯ ಕೃತಿಗಳು

1922ರಷ್ಟು ಹಿಂದೆಯೇ ಬೆಳಕಿಗೆ ಬಂದ

ಡಿ.ವಿ.ಜಿ.ಯವರ 'ವಸಂತ ಕುಸುಮಾಂಜಲಿ'ಯ ಕವನಗಳು ಎಳು ದಶಕಗಳ ನಂತರವೂ ಕನ್ನಡಿಗರ ನಾಲಗೆಯಲ್ಲಿ ನಲಿದಾಡುತ್ತಿವೆ. ಅಂತೆಯೇ 'ನಿವೇದನ' (1924). ಸಂಕಲನದ ಪದ್ಯಗಳು ಕೂಡ. ಅನುವಾದಗಳಾದರೂ ಸ್ವತಂತ್ರ ರಚನೆಗಳಂತೆ ಹೊಸತನ, ರಮ್ಯತೆಯಿಂದ ಮೆರೆದವು 'ಉಮರನ ಒಸಗೆ' (1930). 'ಮ್ಯಾಕ್‌ಬೆತ್' (1936) ಮುಂತಾದವು. ಒಂದು ವಿಶಿಷ್ಟ ಚಿಂತನಪ್ರಧಾನ ರೀತಿಯ ಪದ್ಯಗಳ ಸಂಗ್ರಹ 'ಶ್ರೀಕೀವನ' (1973).

ಶ್ರೀರಾಮನು ಎದುರಿಸಿದ ಧರ್ಮದ್ವೈಧಗಳ ವಿವೇಚನೆಯನ್ನು ರಾಮಾಯಣದ ವಿವಿಧ ಪಾತ್ರಗಳ ನಡುವಣ ಸಂವಾದದ ರೀತಿಯಲ್ಲಿ ನಿರೂಪಿಸಿರುವ ಪದ್ಯಕೃತಿ 'ಶ್ರೀ ರಾಮಪರೀಕ್ಷಣ' ಶ್ರೀ ಕೃಷ್ಣನನ್ನು ಕುರಿತು ಸಾಮಾನ್ಯರಿಗೆ ಬರುವ ಅನೇಕ ಸಂಶಯಗಳನ್ನು ಪರಿಹರಿಸುವ ಪ್ರಯತ್ನ. ಈ ಕೃತಿಯಲ್ಲಿ ಹಾಗೂ 'ಶೃಂಗಾರ ಮಂಗಳಂ' (1970) ಕಾವ್ಯ ಲಹರಿಯಲ್ಲಿ ಡಿ.ವಿ.ಜಿ. ಪ್ರತಿಪಾದಿಸಿರುವ ಒಂದು ಸಿದ್ಧಾಂತ ಸೌಂದರ್ಯಾಸ್ವಾದನೆಯು ಆತ್ಮೋತ್ಕರ್ಷಕ್ಕೆ ಬಾಧಕವಾಗದೆ ಸಹಾಯಕ ಹಾಗೂ ಸಂಸ್ಕಾರಕಾರಿ ಎಂಬುದು

ರೂಪಂ ಧ್ವನಿ, ದನಿ ರಾಗಾ
ಲಾಪಂ, ರಾಗೋಕ್ತಿಯಾ ಸುಧ್ಯರ್ ಸಲ್ಲಾಪಂ
ದೀಪಿಪುದು ಮನವನಾ ರಸ
ದಾಪಗೆಯಾತ್ಮೋಪವನವ ಸೊಂಪಾಗಿಸುಗುಂ
ಸುಖಿಮುಂ ಸಂಸ್ಕಾರಂ ಜೀ-
ವಕೆ ಮುಖಿದವೊಲ್ ಚಿತ್ರಪರಿವಾಚನಕಂ
ವಿಕಸಿತಮದರಿಂ ಹೃತದ್ಮೋ -
ರಕಮಾ ಸೌರಭದೆ ಜೀವಕಾತಮ್ನುಭವಂ
ಭೌತ ಆಧ್ಯಾತ್ಮಗಳ ಪರಸ್ಪರ ಪೂರಕ ಗುಣವನ್ನು 'ಶ್ರೀ ಕೃಷ್ಣ ಪರೀಕ್ಷಣ'ದ ಈ ಮಾತು ಸಂಗ್ರಹಿಸಿದೆ.
ಬ್ರಹ್ಮಕೆ ಹೃದಯವನ್ನಿತ್ತು ಜ -
ಗನ್ಮಂಗಲಕಾರ್ಯಕೊಡಲನೆಲ್ಲನಿತ್ತುಂ
ಇಮ್ಮಿದಲೊಡನಾಡುತ ಸ -
ಇಮ್ಮಿದಲೊಡನಾಡುತ ಸ -
ಚ್ಚಿನ್ಮಯನಂ ಮರೆಯದಿರ್ದೊಡದು ನಿರ್ವಾಣಂ.

ವಿಶ್ವ ಸಂಬೋಧನೆ

ಕಾವ್ಯಕ್ಕೆ ಮಹತ್ವ ಬಂದಿರುವುದು ವಿಶ್ವ ಸಂಬೋಧನೆಯಿಂದ ಎಂಬ ಆಳವಾದ ನಂಬಿಕೆಯ ಇನ್ನೊಂದು ದಿಕ್ಕಿನ ಅಭಿವ್ಯಕ್ತಿ -ಬೇಲೂರು ಚೆನ್ನಕೇಶವ ಸನ್ನಿಧಿಯ ಅಂತಃಪುರದ ಮದನಿಕೆಯರ ವಿಲಾಸ ವಿಭ್ರಮಗಳನ್ನು ಗೀತ ರೂಪದಲ್ಲಿ ಹಿಡಿದಿಟ್ಟಿರುವ 'ಅಂತಃಪುರ ಗೀತೆ' (1950). ಸಂಗೀತ - ನೃತ್ಯ ರಸಿಕರ ಪಾಲಿಗೆ ಅದು ಮರೆಯಲಾಗದ ರಸದೌತಣ ಆ ವೈಭವ-

ವಿಶ್ವ ತಂತ್ರ ರಹಸ್ಯ -
ಬೋಧನೋತ್ಸಾಹಮಿದು
ವಿಶ್ವ ಶಿಲ್ಪಿಯ ಸಭೆಯೊ -
ಲುಚಿತಮೆನಿಕುಂ

ಗೇಯ ಮಾಧ್ಯಮದ ಸಮರ್ಥವಾದ ಬಳಕೆಗೆ ಇನ್ನೊಂದು ನಿದರ್ಶನ ಡಿ.ವಿ.ಜಿ.ಯವರ 'ಗೀತಶಾಕುನ್ತಲ' (1960): ಕಾಳಿದಾಸನ ಶಾಕುನ್ತಲ ನಾಟಕದ ಕೆಲವು ಸರಸ ಸಂದರ್ಭಗಳ ಸಂಗೀತಾನುವಾದ.

ಜೀವನವನ್ನು ಅರ್ಥಪೂರ್ಣಗೊಳಿಸಿಕೊಳ್ಳಬೇಕೆನ್ನುವವರಿಗೆ 'ಮರ್ಜಿ, ಮಾತು, ನಡವಳಿಕೆಗಳ ಸೊಬಗನ್ನು'' ಸುಲಭಗ್ರಾಹ್ಯವಾಗಿ ತಿಳಿಸಿರುವ ಗ್ರಂಥಗಳು 'ಬಾಳಿಗೊಂದು ನಂಬಿಕೆ' (1950) ಮತ್ತು 'ಸಂಸ್ಕೃತಿ' (1953)

ಪ್ರವೃತ್ತಿ - ನಿವೃತ್ತಿ ಸಮನ್ವಯ, ವ್ಯಷ್ಟಿ-ಸಮಷ್ಟಿ ಮುಂತಾದ ದಾರ್ಶನಿಕ ತತ್ವಗಳ ಪ್ರತಿಪಾದನೆಗಾಗಿ ಡಿ.ವಿ.ಜಿ. ಬರೆದವು 'ಈಶೋಪನಿಷತ್ತು' ಮತ್ತು 'ಪುರುಷ ಸೂಕ್ತ' ವ್ಯಾಖ್ಯಾನಗಳು (1951)

ಮಂಕುತಿಮ್ಮನ ಕಗ್ಗ

ಎಲ್ಲರಿಗೂ ಬಂದೊದಗುವ ಅಘಾತಗಳನ್ನೂ ಜೀವನಕ್ಲೇಶಗಳನ್ನೂ ಎದುರಿಸಲು ಮನಃಸ್ಥೈರ್ಯವುಂಟುಮಾಡುವ ಹಿತಬೋಧನೆಗಳನ್ನೊಳಗೊಂಡ ಡಿ.ವಿ.ಜಿ.ಯವರ 'ಮಂಕುತಿಮ್ಮನಕಗ್ಗ' (1943) ಕನ್ನಡ ಭಾಷೆಯ ಅತ್ಯಂತ ಜನಪ್ರಿಯ ಕೃತಿಗಳಲ್ಲೊಂದೆನಿಸಿದೆ. ಯಾವ ಕಾರಣದಿಂದಲಾದರೂ ಮನಸ್ಸು ಕುಗ್ಗಿದ್ದಾಗ ಎಂಥವರಿಗೂ ಸಾಂತ್ವನ ನೀಡುವ ಅಪೂರ್ವವಚನ ಸಂಗ್ರಹ ಇದು. ಜನತೆಗೆ ಡಿ.ವಿ.ಜಿ. ಮಾಡಿರುವ ಉಪಕಾರಗಳಲ್ಲಿ 'ಕಗ್ಗ' ವಿಶೇಷವಾಗಿ ಸ್ಮರಿಸಬೇಕಾದ್ದು. 'ಕಗ್ಗ'ದ ಪದ್ಯಗಳು ಅನೇಕರ ಜೀವನದಲ್ಲಿ ಆತ್ಮೀಯ ಮಿತ್ರನ ಸ್ಥಾನ ಪಡೆದಿವೆ.

'ಕಗ್ಗ'ದ ಒಂದೊಂದು ಪದ್ಯವೂ ಜೀವನ ಶ್ರದ್ಧೆಯನ್ನು ದೃಢಿಷ್ಠಗೊಳಿಸುವಂಥದು :

'ಕಗ್ಗ'ದ ಒಂದೊಂದು ಪದ್ಯವೂ ಜೀವನ ಶ್ರದ್ಧೆಯನ್ನು ದೃಢಿಷ್ಠಗೊಳಿಸುವಂಥದು

ಒಲ್ಲೆನೆನದಿರು ಬಾಳನ್, ಒಲವದೇನೆನ್ನದಿರು
ಉಲ್ಲಾಸಕೆಡೆಮಾಡು ನಿನ್ನಿನಾದನಿತು
ನಿಲ್ಲು ಕೆಚ್ಚೆದೆಯಿಂದಲನ್ಯಾಗಳನಳಿಸೆ
ಎಲ್ಲಕಂ ಸಿದ್ಧನಿರು-ಮಂಕುತಿಮ್ಮ

ಒಂದೇ ಮಾತಿನಲ್ಲಿ ಹೇಳಬೇಕೆಂದರೆ 'ಆಶ್ಮೌಪಮ್ಯ' ಇಲ್ಲಿ ಉಪದೇಶ :

## ಮುರಜಾಮೋದ

ರಾಗ - ಅಠಾಣ । ।ತಾಳ - ಮಿಶ್ರಚಾಪು

ಏನೀ ಮಹಾನಂದವೇ - ಓ ಭಾಮಿನೀ ।
ಏನೀ ಸಂಭ್ರಮದಂದವೇ ಬಿಲ್ಲಿಂದವೇ ॥ ಪ.
ಏನೀ ನೃತ್ಯಾಮೋದ - ಏನೀ ಮೌರಜನಾದ ।
ಏನೀ ಜೀವೋನ್ಮಾದ - ವೇನೀ ವಿನೋದ ॥ ಅ.ಪ.
ಡಕ್ಕೆಯ ಶಿರಕತ್ತಿ - ತಾಳಗೋಲಿಂ ತಟ್ಟಿ ।
ತಕ್ಕಿಟ ಧಿಮಿಕಿಟ - ತಕಝಣುಬುರೆನಿಸಿ ॥
ಹುಕ್ಕಿತೆ ಚರಣವ - ಕುಲುಕುತೆ ಕಾಯವ ।
ಸೊಕ್ಕಿದ ಕುಣಿತವ ಕುಣಿವೆ ನೀನೆಲೆ ಬಾಲೆ ॥ ೧
ಆರೋ ನಿನ್ನಯ ಹೃದಾ - ಗಾರದಿ ನರ್ತಿಸಿ ।
ಮಾರಹೊರತೆಯ ಪ್ರ ಚಾರಿಸುತಿರ್ಪನ್ ॥
ಸ್ಮೇರವದನ ನಮ್ಮ - ಚೆನ್ನ ಕೇಸವರಾಯ ।
ನೋರೆಗಣ್ಣಿಂ ಸನ್ನೆ ತೋರುತಲಿಹನೇನ್ ॥ ೨

- ಡಿವಿಜಿ

ಜಗದ ಕಲ್ಯಾಣದೊಳಗಾತ್ಮಕಲ್ಯಾಣವನು
ಜಗದ ಬೀದಿಗಳೊಳು ನಿಜಾತ್ಮಯಾತ್ರೆಯನು
ಜಗದ ಜೀವಿತದಿ ನಿಜಜೀವಿತದ ಪೂರ್ತಿಯನು
ಬಗೆಯರಿತವನೆ ಸುಖಿ - ಮಂಕುತಿಮ್ಮ

ಗೀತಾ ತಾತ್ಪರ್ಯ

ಡಿ.ವಿ.ಜಿ.ಯವರ ಉಪನ್ಯಾಸ ಸಂಗ್ರಹವಾದ 'ಶ್ರೀಮದ್ ಭಗವದ್ಗೀತಾ ತಾತ್ಪರ್ಯ'ದ (1956) ಉದ್ದಕ್ಕೂ ನಾವು ಕಾಣುವುದು ಇದೆ ಅಂತರ್ಧ್ವನಿಯನ್ನು ಭಗವದ್ಗೀತೆಯು ಕಾಷಾಯ ಸಂನ್ಯಾಸವನ್ನು ಉಪದೇಶಿಸುವ ಗ್ರಂಥವಲ್ಲ; ಲೋಕಜೀವನದ ವಿಷಯದಲ್ಲಿ ಗೌರವ ಬುದ್ಧಿಯನ್ನೂ, ಕರ್ತವ್ಯಾಚರಣೆಯಲ್ಲಿ ಉತ್ಸಾಹವನ್ನು ಉಂಟು ಮಾಡುವ ಗ್ರಂಥ ಅದೆಂದು ಡಿ.ವಿ.ಜಿ. ವ್ಯಾಖ್ಯೆ ಮಾಡಿದ್ದಾರೆ:

ವಿವಿಧ ಮತ ಗಭೀರಂ ಸಾಮರಸ್ಯ ಪ್ರಕಾರಂ
ಗೃಹಿ-ಯತಿ ಸಮುದಾರಂ ಸರ್ವಜೀವೋಪಕಾರಂ
ಸುರ-ನರ ಸಹಕಾರಂ ಸ್ವಾತ್ಮ-ಸರ್ವಾತ್ಮಸಾರಂ
ಭವಜಲನಿಧಿಪಾರಂ ಕೃಷ್ಣಗೀತಾವತಾರಂ

ಮತಭೇದ ವಿವಾದಗಳೆಲ್ಲ ಬಹುಮಟ್ಟಿಗೆ ಕಾಬ್ಬಿಕವೆಂದೂ ವಿವಿಧ ಮತಗಳಲ್ಲಿ ಸಾಮರಸ್ಯ ಶಕ್ಯ ಹಾಗೂ ಅವಶ್ಯವೆಂದೂ ಡಿ.ವಿ.ಜಿ. ಪ್ರತಿಪಾದಿಸಿದ್ದಾರೆ.

ದ್ವೈತಮೊ ಮತಂ ವಿಶಿಷ್ಟಾ
ದ್ವೈತಮೊ ಅದ್ವೈತಮೋ ಅದೇನಾದೊಡದೇಂ
ಭೂತವ್ರಾತದೊಳಾರ್ಗಂ
ಭೂತಮೊ ಪರವಸ್ತುವವನೆ ಕೃತಪರಮಾರ್ಥಮಂ
ಸರ್ವೋಹಮೆಂದು ಲೋಕವ

ನಿರ್ವಹಿಪಂಗೆತ್ತಲುಂ ವಸಂತಾರಾಮಂ
ನಿರ್ವೈರಂ ನಿರ್ಮೋಹಂ
ನಿರ್ವಾಣಪದಸ್ನಾತನುಸಿರ್ವೆಡೆ ಪುಣ್ಯಂ

ಅಂತರಂಗ ಜೀವನೋತ್ಸಾಹಿಗಳಿಗೆ ಅತ್ಯವಶ್ಯವಾದ್ದು ಈ ಸಾಮರಸ್ಯದ ದೃಷ್ಟಿ.

**ಜ್ಞಾಪಕ ಚಿತ್ರಶಾಲೆ**

ಡಿ.ವಿ.ಜಿಯವರ ಒಂದು ಅನಿತರಸಾಧಾರಣ ಕೃತಿಮಾಲೆ ಅವರ 'ಜ್ಞಾಪಕ ಚಿತ್ರಶಾಲೆ'ಯ ಎಂಟು ಸಂಪುಟಗಳು. ಗತಯುಗದ ಸಮಾಜ ಪರಿಸರ, ಜೀವನ ರೀತಿ ಹಾಗೂ ಹಿಂದಿನ ಎರಡು ಪೀಳಿಗೆಗಳ ಹತ್ತಾರು ಮಂದಿ ಸಾರ್ವಜನಿಕರ, ಪ್ರಸಿದ್ಧ ಪುರುಷರ ಮತ್ತು ಜನಸಾಮಾನ್ಯರ ವ್ಯಕ್ತಿ ವೈಶಿಷ್ಟ್ಯಗಳನ್ನು ಚಿತ್ರಿಸಿರುವ ಅಪೂರ್ವ ದಾಖಲೆಗಳು ಇವು. 1953ರಿಂದ ಬೇರೆ ಬೇರೆ ಪತ್ರಿಕೆಗಳಲ್ಲಿ ಲೇಖನಮಾಲೆಗಳಾಗಿಯೂ 1969ರಿಂದಾಚೆಗೆ ಗ್ರಂಥ ರೂಪವಾಗಿಯೂ ಹೊರಬಂದ ಈ ಪ್ರಬಂಧಗಳು ಗತಯುಗದ ಸಮಾಜೇತಿಹಾಸದ ಅದ್ವಿತೀಯ ದಾಖಲೆಗಳು. ಅವುಗಳ ವೈವಿಧ್ಯವೂ, ಸ್ವಾರಸ್ಯವೂ ಓದಿಯೇ ಸವಿಯಬೇಕು. ಸ್ವಭಾವತಃ ವಿನೋದಪ್ರಿಯರಾದ ಡಿ.ವಿ.ಜಿ.ಯವರ ಹಾಸ್ಯಪ್ರಜ್ಞೆ ಈ ಸಂಪುಟಗಳುದ್ದಕ್ಕೂ ವಿಜೃಂಭಿಸಿದೆ. ಪ್ರಸಿದ್ಧ ಪುರುಷರನ್ನು ಕುರಿತು ಬರೆಯುವಷ್ಟೆ ಉತ್ಸಾಹದಿಂದ ತೀರ ಅತಿಸಾಮಾನ್ಯರ ಗೃಹಜೀವನ ಶೈಲಿಯನ್ನೂ ಡಿ.ವಿ.ಜಿ. ಕಣ್ಣಿಗೆ ಕಟ್ಟುವಂತೆ ನಿರೂಪಿಸಿದ್ದಾರೆ. ಎಲ್ಲ ಮನೆಗಳಲ್ಲೂ ಅಷ್ಟಿಷ್ಟು ಕಷ್ಟ ಕಾರ್ಪಣ್ಯಗಳು, ಅಷ್ಟಿಷ್ಟು ಶುಭ ಸಂತೋಷಗಳೂ; ಬಡತನ, ಅದರೊಡನೆ ಒಂದಿಷ್ಟು ನಂಬಿಕೆ ; ಕೊಂಚ ಸಾಧನೆ; ಹಾಗ ಪಾಲು ಕೊರತೆ, ಮುಬ್ಬಾಗ ಪಾಲು ನೆಮ್ಮದಿ; ಒಟ್ಟಿನಲ್ಲಿ ಜೀವಸಹಾನುಭೂತಿ, ಜೀವನದ ರೀತಿಯಲ್ಲಿ ಸರಳತೆ, ಸ್ವಾಭಾವಿಕತೆ : ನಮ್ಮ ದೇಶದಲ್ಲಿ ಒಂದು ಕಾಲದಲ್ಲಿ ಸರ್ವಸಾಮಾನ್ಯವಾಗಿದ್ದ ಜೀವನ ಶೈಲಿ ಇದು. ಅಂಥ ನೆಮ್ಮದಿಯ ಯುಗ ಕಳೆದುಹೋಗಿ ಎಂಥ ನಿರಂತರ ತಳಮಳದ ಯುಗ ಆರಂಭವಾಗಿದೆ ಈಗ ಎನಿಸುತ್ತದೆ ಡಿ.ವಿ.ಜಿ.ಯವರ 'ಜ್ಞಾಪಕ ಚಿತ್ರಶಾಲೆ'ಯ ಸಂಪುಟಗಳನ್ನು ಓದಿದಾಗ.

ಒಮ್ಮೆ ಹೂದೋಟದಲ್ಲಿ ಒಮ್ಮೆ ಕೆಳಕೂಟದಲಿ
ಒಮ್ಮೆ ಸಂಗೀತದಲ್ಲಿ ಒಮ್ಮೆ ಶಾಸ್ತ್ರದಲಿ
ಒಮ್ಮೆ ಸಂಸಾರದಲಿ, ಮತ್ತೊಮ್ಮೆ ಮೌನದಲಿ
ಬ್ರಹ್ಮಾನುಭವಿಯಾಗೊ - ಮಂಕುತಿಮ್ಮ

**ಜನಾದರಣೆ**

ಎಲ್ಲ ಸನ್ಮಾನಗಳನ್ನು ದೂರವಿರಿಸ ಬಯಸಿದ ಡಿ.ವಿ.ಜಿ.ಯವರಿಗೆ ಸಹಜವಾಗಿಯೇ ಕೆಲವಾರು ಪ್ರಶಸ್ತಿಗಳು ಬಂದವು. ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟೋರೇಟ್ (1961), 'ಶ್ರೀಮದ್ ಭಗವದ್ಗೀತಾ ತಾತ್ಪರ್ಯ'ಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ (1967), ನಾಗರಿಕರಿಂದ ಸನ್ಮಾನ ಹಾಗೂ ನಿಧಿಸಮರ್ಪಣೆ (1970), ರಾಷ್ಟ್ರಾಧ್ಯಕ್ಷರ 'ಪದ್ಮಭೂಷಣ' ಪ್ರಶಸ್ತಿ (1974). ಆದರೆ ಡಿ.ವಿ.ಜಿ.ಯವರ ಎಣಿಕೆಯಲ್ಲಿ ಅವರಿಗೆ ಸಂದ ಬಹುದೊಡ್ಡ ಪ್ರಶಸ್ತಿ ಎಂದರೆ ಜನಾದರಣೆ. ಸಾಹಿತ್ಯ ಅಕಾಡಮಿಯ ಪ್ರಶಸ್ತಿ ಬಂದ ಸಂದರ್ಭದಲ್ಲಿ ಅಭಿಮಾನಿಗಳೂ, ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳೂ ಅಭಿನಂದಿಸಲು ಡಿ.ವಿ.ಜಿ.ಯವರ ಮನೆಗೆ ಹೋದಾಗ ಅವರು ಸ್ಮರಿಸಿದ್ದು (ಬಹುಶಃ ಬಸವಪ್ಪ ಶಾಸ್ತ್ರಿಗಳ) ಈ ಪದ್ಯ :

ಅರಸರ ಕುದುರೆಯಾ ಕಾರ್ತ
ಸ್ವರ ಕಂಕಣಮಿರ್ಕೆ, ರಸವನಾಸ್ವಾದಿಸಿ ಕಾ
ವ್ಯರಸಿಕರೊಲಿದೀವಾ ಭಾ
ಸುರತರ ಕಣ್ಕಣಮೆ ಕವಿಗೆ ಕಂಕಣಮಲ್ತೇ.

(ಕೃಪೆ : ಸಾಲು ದೀಪಗಳು)

## THE MYSORE ASSOCIATION, BOMBAY

### Forthcoming Programmes

**ಶನಿವಾರ, ದಿನಾಂಕ 7-1-2006 ಸಂಜೆ 6 ರಿಂದ 8**

ಅಸೋಸಿಯೇಷನ್‌ನ ಬಂಗಾರದ

| | | |
|---|---|---|
| ಹಬ್ಬ ದತ್ತಿ ಉಪನ್ಯಾಸ | : | ಪ್ರೊ. ಎಂ. ಎಚ್. ಕೃಷ್ಣಯ್ಯ, ಬೆಂಗಳೂರು |
| ವಿಷಯ | : | "ಡಿವಿಜಿ ವ್ಯಕ್ತಿ - ಕೃತಿ" |
| ಡಿವಿಜಿಯ ಕವನಗಳ ಗಾಯನ | : | ಶ್ರೀಮತಿ ಶ್ಯಾಮಲಾ ರಾಧೇಶ್ ಮತ್ತು ಶ್ರೀಮತಿ ಶ್ಯಾಮಲಾ ಪ್ರಕಾಶ್ |

**ರವಿವಾರ, ದಿನಾಂಕ 8-1-2006 ಬೆಳಿಗ್ಗೆ 10ರಿಂದ 1.30**

ವಿಚಾರ ಸಂಕಿರಣ

| | | |
|---|---|---|
| ಅಧ್ಯಕ್ಷತೆ | : | ಶ್ರೀಮತಿ ಪ್ರೊ. ಗೀತಾ ನಾಗಭೂಷಣ, ಬೆಂಗಳೂರು |
| ವಿಷಯ ೧) | : | 'ಡಿವಿಜಿಯವರ ಸಾರ್ವಜನಿಕ ಜೀವನ' |
| ಉಪನ್ಯಾಸಕರು | : | ಶ್ರೀ ಎಸ್. ಆರ್. ರಾಮಸ್ವಾಮಿ, ಬೆಂಗಳೂರು |
| ವಿಷಯ ೨) | : | 'ಜೀವನ ಧರ್ಮ ಯೋಗ' |
| ಉಪನ್ಯಾಸಕರು | : | ಡಾ. ಪಾದೇಕಲ್ ವಿಷ್ಣು ಭಟ್, ಉಡುಪಿ |
| ವಿಷಯ ೩) | : | 'ಜ್ಞಾಪಕ ಚಿತ್ರಶಾಲೆ' |
| ಉಪನ್ಯಾಸಕರು | : | ಡಾ. ಕೆ. ರಘುನಾಥ್, ಮುಂಬಯಿ |
| ಸಮಾರೋಪ | : | ಪ್ರೊ. ಎಂ. ಎಚ್. ಕೃಷ್ಣಯ್ಯ, ಬೆಂಗಳೂರು |

ಮಧ್ಯಾಹ್ನ 1.30 ಸಹಭೋಜನ

**2.30 - 4.00 "ಅಂತಃಪುರ ಗೀತೆಗಳು"**

ನೃತ್ಯರೂಪಕ

ಶ್ರೀಮತಿ ಶೈಲಜಾ ಮಧುಸೂದನ್ ಮತ್ತು ತಂಡ, ನೃತ್ಯ ವಿದ್ಯಾಲಯ, ಮುಂಬಯಿ

**ರವಿವಾರ, ದಿನಾಂಕ 22-1-2006 ಬೆಳಿಗ್ಗೆ 10 ಮಧ್ಯಾಹ್ನ 2.00**

**ವಾರ್ಷಿಕ ಕ್ರೀಡಾ ಕೂಟ**

ಸ್ಥಳ : ಎನ್.ಕೆ.ಇ.ಎಸ್. ಶಾಲೆಯ ಕ್ರೀಡಾಂಗಣ, ವಡಾಲ

**ಗುರುವಾರ, ದಿನಾಂಕ 1-2-2006 ಸಂಜೆ 6.00 ರಿಂದ 9.00**

ಮಾಘಿ ಗಣಪತಿ ಹೋಮ ಮತ್ತು ಪೂಜೆ

**ಗುರುವಾರ, ದಿನಾಂಕ 8-2-2006 ರಿಂದ 12-2-2006 ವರೆಗೆ**

**ಚಂದ್ರಶೇಖರ ಕಂಬಾರರ ನಾಟಕೋತ್ಸವ**

ವಿವರಗಳಿಗೆ ಅಸೋಸಿಯೇಶನ್‌ನಲ್ಲಿ ಸಂಪರ್ಕಿಸಿರಿ.

# ಡಿ.ವಿ. ಗುಂಡಪ್ಪ

- ರಂ. ಶ್ರೀ. ಮುಗಳಿ

ಡಿ.ವಿ.ಜಿ. ಅಂದರೆ ಡಿ.ವಿ. ಗುಂಡಪ್ಪನವರು ಮೊದಲ ಪೀಳಿಗೆಯ ಇನ್ನೊಬ್ಬ ಪ್ರಮುಖ ಕವಿಗಳಾಗಿದ್ದಾರೆ. 'ವಸಂತಕುಸುಮಾಂಜಲಿ, ನಿವೇದನ, ಅಂತಃಪುರಗೀತೆ' ಈ ಸಚಿತ್ರ ಸಂಗ್ರಹಗಳಲ್ಲಿ ಅವರ ಬಿಡಿಯಾದ ಕವನಗಳೂ ಗೀತಗಳೂ ಶೇಖರವಾಗಿವೆ. 'ಉಮರನ ಒಸಗೆ' ಎಂಬ ಅವರ ಸಚಿತ್ರ ಪುಸ್ತಕದಲ್ಲಿ ಓಮರ್‌ಖಯ್ಯಾಮನ ಕವಿತೆಗಳ ಸೊಗಸಾದ ಅನುವಾದವಿರುತ್ತದೆ. 'ಮೇಲೆನೋಡೆ ಕಣ್ಣ ತಣಿಪ ನೀಲಪಟದಿ ವಿವಿಧ ರೂಪ ಜಾಲಗಳನು ಬಣ್ಣಿಸಿರ್ಪ ಚಿತ್ರಚತುರನಾರ್' ಎಂಬ ಕುತೂಹಲದಿಂದ ಕುಡಿವರಿದ ಅವರ ಕವಿತೆ ನಿಸರ್ಗ ದೃಶ್ಯ ಸಹಜವಾಗಿರುತ್ತವೆ. ಅವುಗಳಲ್ಲಿ 'ಬೇಲೂರಿನ ಶಿಲಾಬಾಲಿಕಯರು' ಇದು ಬೇಲೂರಿನ ಚೆನ್ನಕೇಶವನ ಗುಡಿಯ ಮದನ ಕೈಗೊಂಬೆಗಳ ಚೆಲುವನ್ನು ಬಿಡಿಬಿಡಿಸಿ ಬಣ್ಣಿಸಿರುತ್ತದೆ. ಅವುಗಳ ಜೀವಂತಿಕೆ ಕವಿಗೆ ಒಂದು ಕ್ಷಣ ಭ್ರಮೆಯುಂಟು ಮಾಡುತ್ತದೆ. ಅಂತೇ ಒಂದೊಂದಾಗಿ ಅವನು ಅವನ್ನು ಕೇಳುತ್ತಾನೆ. 'ಶೃಂಗಾರ ವಲ್ಲರಿಯೇ ಲತೆಯೊಡನೆ ಬಳುಕಿ ನೀಂ ನೃತ್ಯಲಾಸ್ಯದಿನಾರನೊಲಿಸುತಿರುವೆ, ಮಾಧುರ್ಯ ಮಂಜೂಷೆ ಮಧುರತರ ಮೌನದಿಂದಾರ ಚರಿತೆಗಳ ಶುಕಿಗುಸಿರುತಿರುವೆ' ಮುಂತಾಗಿ. ಕೊನೆಗೆ ಸೌಂದರ್ಯವೇ ವಿಶ್ವ ತತ್ತ್ವಂ, ಆ ಪರತತ್ತ್ವ ಭಾಸಮೇ ಸೌಂದರ್ಯ ಎಂದು ಬೋಧ ಪಡೆದು ಅದನ್ನು ಮುಗಿಸಿದ್ದಾನೆ. 'ವನಸುಮ, ದಾರಿಹೋಕರು' ಇವೂ ಅವರ ಗಣ್ಯವಾದ ಕವನಗಳು. 'ಬೇಲೂರಿನ ಶಿಲಾಬಾಲಿಕೆಯರು' ಕವಿತೆಯ ಮೂಲಸ್ಫೂರ್ತಿ ಇನ್ನಷ್ಟು ಬಿತ್ತರಗೊಂಡು 'ಅಂತಃಪುರಗೀತೆ'ಯಾಗಿ ಪರಿಣಮಿಸಿದೆ. ಈ ಗೀತೆಗಳಲ್ಲಿ ಭಾವಾಂಶಕ್ಕಿಂತ ಗೇಯಾಂಶವೇ ಹೆಚ್ಚಾಗಿದೆ ಎಂದು ಸಾಮಾನ್ಯವಾಗಿ ಹೇಳಬಹುದು. ಅವರ ಶ್ರೇಷ್ಠ ಕೃತಿಯೆಂದರೆ ಸುಮಾರು ಒಂದು ಸಾವಿರ ಪದ್ಯಗಳಲ್ಲಿ ಹರಡಿಕೊಂಡರೂ ಹೆಪ್ಪುಗಟ್ಟಿದ ತಿಳಿವಳಿಕೆಯುಳ್ಳ 'ಮಂಕುತಿಮ್ಮನ ಕಗ್ಗ'. ಅವರ ಪರಿಪಕ್ವವಾದ ಜೀವನದರ್ಶನವು ಬಹುಭಾಗದಲ್ಲಿ ಸಾಹಿತ್ಯರಸವಾಗಿ ಅದರಲ್ಲಿ ಹರಿದಿದೆ. ಅದು ಅವರ ರಸಘಟ್ಟಿ; ಕನ್ನಡಕ್ಕೆ, ಭಾರತಕ್ಕೆ ಬೆಲೆಯುಳ್ಳ ಕಾಣಿಕೆ. ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ವಿಚಾರಗಳ ಸಾರಭೂತ ಅಂಶಗಳನ್ನು ಸಮನ್ವಯಗೊಳಿಸಿ ಅವರು ಪಡೆದ ತಿಳಿವಳಿಕೆ ಕಾವ್ಯರೂಪ ತಾಳಿದೆ. ಅದೊಂದು ಬೌದ್ಧಿಕ ವಿಕ್ರಮ, ಸಾಹಿತ್ಯ ಸಾಹಸ ಎನ್ನಬಹುದು. ಮಂಕುತಿಮ್ಮ ಎಂದು ತನ್ನನ್ನು ಕರೆದುಕೊಳ್ಳುವ ಒಬ್ಬ ಹಳ್ಳಿಯ ಗುರು ಬರೆದಿಟ್ಟ ಕಡತವೆ' ಮಂಕುತಿಮ್ಮನ ಕಗ್ಗ' ಅದರಲ್ಲಿ ಕಲೆಯಿಲ್ಲ, ಪಾತ್ರಗಳಿಲ್ಲ. ಆದರೆ ಜೀವನದಲ್ಲಿ ಎಂದಿಗೂ ಎಲ್ಲರೂ ಎದುರಿಸಬೇಕಾದ ಪ್ರಶ್ನೆಗಳಾವವು? ಅವಕ್ಕೆ ಉತ್ತರವೇನು ಎಂಬುದನ್ನು ಅದರಲ್ಲಿ ರಸವತ್ತಾಗಿ ನಿರೂಪಿಸಲಾಗಿದೆ. ಅದರಲ್ಲಿ ಬಿತ್ತರವಿದ್ದಂತೆ ಬಿಗಿಕಟ್ಟೂ ಇದೆ. ತತ್ತ್ವದ ಚರ್ಚೆ ಇರುವಂತೆ ಕಾವ್ಯದ ಲೇಪವೂ ಇರುತ್ತದೆ. ಹೊಸ ಕಾಲದ ಸರ್ವಜ್ಞನ ವಚನಗಳ ಹಾಗೆ ಅದರಲ್ಲಿಯ ಪದ್ಯಗಳು ಕೆಲವು ಸಲ ತೋರುತ್ತವೆ. ಇಂದಿನ ಜೀವನ ಹೇಗಿದೆ ಎಂಬುದನ್ನು ಅದರಲ್ಲಿ ಹೀಗೆ ಬಣ್ಣಿಸಲಾಗಿದೆ. 'ಇಳೆಯ ಬಿಟ್ಟು ಇನ್ನುಂ ಎತ್ತಲುಂ ಐದದ ಪ್ರೇತವು ಅಲೆವಂತೆ ಲೋಕ ತಲ್ಲಣಿಸುತಿಹುದಿಂದು. ಹಳೆ ಧರ್ಮ ಸತ್ತಿಹುದು ಹೊಸ ಧರ್ಮ ಹುಟ್ಟಿಲ್ಲ. ತಳಮಳಕೆ ಕಡೆಯೆಂದೊ?' ಪುಸ್ತಕ ವಿದ್ಯೆ ಮತ್ತು ಸ್ವಂತಕ್ಕೆ ಪಡೆದ ತಿಳಿವಳಿಕೆ ಇವನ್ನು ಹೋಲಿಸುವ ಇಲ್ಲಿಯ ರೀತಿ ಹೃದ್ಯವಾಗಿದೆ: 'ಪುಸ್ತಕದಿ ದೊರೆತರಿವು ಮಸ್ತಕದಿ ತಳೆದ ಮಣಿ, ಚಿತ್ತದೊಳು ಬೆಳೆದರಿವು ತರುತಳೆದ ಪುಷ್ಪ ! ಲೋಕದಲ್ಲಿ ಮತ್ಸರವೆಷ್ಟು ಎಚ್ಚರಗೆಡಿಸುವ ಶಕ್ತಿ ಎಂದು ತೋರುವಾಗ ಕವಿ ಹೇಳಿದ್ದಾನೆ : 'ಹೊಟ್ಟೆಯೊಂದರ ರಗಳೆ ಸಾಲದೆಂದೇನೊ ವಿಧಿ ಹೊಟ್ಟೆಕಿಚ್ಚಿನ ಕಿಡಿಯ ನೆಟ್ಟಿಹನು ನರನೊಳ್. ಹೊಟ್ಟೆ ತುಂಬಿದ ತೋಳ ಮಲಗೀತು; ನೀಂ ಪೆರರ ದಿಟ್ಟಿಸುತ ಕರುಬುವೆಯೋ! ಸ್ವಲ್ಪದರಲ್ಲಿ ಬದುಕೆಂದರೇನೆಂಬು ದನ್ನು ಹೀಗೆ ಇಲ್ಲಿ ಹೇಳಿದೆ: ಅಡಿ ಜಾರಿ ಬೀಳುವುದು; ತಡವಿಕೊಂಡೇಳುವುದು; ಕಡುಬ ನುಂಗುವುದು, ಕಹಿಮದ್ದು ಕುಡಿಯುವುದು; ದುಡುಕಿ ಮತಿದಪ್ಪುವುದು, ತಪ್ಪನೊಪ್ಪೆನ್ನುವುದು; ಬದುಕೆಂಬುದಿದು ತಾನೆ ! ಇನ್ನೊಂದು ಕಡೆಗೆ 'ಬದುಕು ಜಟಕಾ ಬಂಡಿ, ವಿಧಿಯದರ ಸಾಹೇಬ, ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗರು ಮದುವೆಗೋ ಮಸಣಕೋ ಹೋಗೆಂದಕಡೆಗೋಡು, ಪದಕುಸಿಯೆ ನೆಲವಿಹುದು' ಎಂದು ಮಾರ್ಮಿಕವಾಗಿ ಬಣ್ಣಿಸಲಾಗಿದೆ. 'ಇಂಥ' ವಿಡಂಬನೆಯ ಉಕ್ತಿಗಳಿದ್ದರೂ ಬಾಳಿಗೆ ಧೈರ್ಯವನ್ನು ಕೊಡುವ, ವಿವೇಕವನ್ನು ತಿಳಿಹೇಳುವ ಅನೇಕ ಮಾತುಗಳು ಇಲ್ಲಿರುತ್ತವೆ. ಉದಾಹರಣೆಗೆ : 'ಕಕ್ಷಿಗಾರನ ವೋಲೇ ತೋರುತ್ತ ನ್ಯಾಯಕ್ಕೆ, ಸಾಕ್ಷಿಯವೋಲಿರು ಕಡೆಗೆ ತೀರ್ಪಾಗುವಂದು ಭಿಕ್ಷುವೋಲು ಕಾಲ ಸವೆಯಿಸಿ ಲೋಕಯಾತ್ರೆಯಲಿ ಪಕ್ಷಿಯೊಲು ಮನದೊಳಿರು', ಬದುಕೊಂದುಕದನ ವೆಂದಂಜಿ ಬಿಟ್ಟೋಡುವವನು ಬಿದಿಯ ಬಾಯಿಗೆ ಕವಳವಾಗದುಳಿಯುವನೇ? ಎದೆಯ ನುಕ್ಕಾಗಿಸುತ ಮತಿಗದೆಯ ಪಿಡಿದು ನೀನೆದುರು ನಿಲೆ, ಬಿದಿಯೊಲಿವೆ, 'ಎಲ್ಲರೊಳು ತಾನು ತನ್ನೊಳಗೆಲ್ಲ ರಿರುವ ವೋಲೆಲ್ಲೆಲ್ಲಿಯೂ ನೋಡಿನಡೆದು ನಗುತಳುತ ಬೆಲ್ಲ ಲೋಕಕ್ಕಾಗಿ ತನಗೆ ತಾ ಕಲ್ಲಾಗಬಲ್ಲವನೆ ಮುಕ್ತನಲ', 'ಜಗದ ಕಲ್ಯಾಣ ದೊಳಗಾತ್ಮ ಕಲ್ಯಾಣವನು ಜಗದ ಬೀದಿಗಳೊಳು ನಿಜಾತ್ಮ ಯಾತ್ರೆಯನು ಜಗದ ಜೀವಿತದಿ ನಿಜ ಜೀವಿತದ ಪೂರ್ತಿಯನು ಬಗೆಯಲಂತವನು ಸುಖಿ'

(ಕೃಪೆ : ಕನ್ನಡ ಸಾಹಿತ್ಯ ಚರಿತ್ರೆ)

## ಶುಕ ಭಾಷಿಣಿ

*ರಾಗ - ಬೇಹಾಗ್ ]  [ತಾಳ - ಏಕ*

*ಏನೇ ಶುಕ ಭಾಷಿಣೀ - ಇದು ।*
*ಏನೇ ಶುಕ ಭಾಷಿಣೀ - ಸುದ್ದಿ - ।*
*ಯೇನೇ ಮನೋಲ್ಲಾಸಿನೀ ॥*  ಪ.

*ಆರಾರ ತೆಗಳುತಲಾರಾರ ಪೊಗಳುತ ।*
*ಕೀರಾಲಿಗುಸಿರುವೆ ಮಾರಾಂತರಂಗವ ॥*  ಅ.ಪ.

*ಚಿಂತಾವಿಚಾರಂಗಳೇಂ - ನಿನ್ನ ।*
*ಸಂತೋಷ ಗೋಪ್ಯಂಗಳೇಂ ॥*
*ಕಾಂತಂಗದೇನೇ - ಕಾಂತಂಗಳೊಸಗೆಯ ।*
*ಕಾತೇ ನೀಂ ಕಳುಹಿ ಆ - ಶಾಂತನನಾಗಿಪೆ ॥*  ೧


*ವನ್ಯಪ್ರವಾಸಿಯೊಳೇಂ - ನಿನ್ನ ।*
*ಬಿನ್ನಾಣ ಬೂತಾಟಗಳ್ ॥*
*ಇನ್ನಾರುಮಿಲ್ಲವೆ ಚೆನ್ನ ಕೇಶವನಿಗೆ ।*
*ನಿನ್ನಂದ ಚಂದವ ಬಣ್ಣಿಪ್ಪ ಚತುರರು ॥*  ೨

- ಡಿವಿಜಿ

ಎಲ್ಲರಿಗೂ
ಹೊಸ ವರ್ಷ 2006
ಶುಭ ಸಂತೋಷಗಳನ್ನು
ತರಲೆಂದು
ನೇಸರು
ಹಾರೈಸುತ್ತದೆ.

# ಬೇಲಿ ಮತ್ತು ಹೊಲ ನಾಟಕ ಪ್ರದರ್ಶನ

ಬೆಂಗಳೂರಿನ ನಾಗನಾಥಪುರ ಮೈಕೊ ತಂಡದವರು ಶುಕ್ರವಾರ, ೨೩-೧೨-೨೦೦೫ರ ಸಂಜೆ ಮೈಸೂರು ಅಸೋಸಿಯೇಷನ್‌ನ ಸಭಾಂಗಣದಲ್ಲಿ 'ಬೇಲಿ ಮತ್ತು ಹೊಲ' ಎಂಬ ನಾಟಕವನ್ನು ಪ್ರಸ್ತುತಪಡಿಸಿದರು. ಕುಂ. ವೀರಭದ್ರಪ್ಪನವರ ಕಾದಂಬರಿಯನ್ನು ನಾಟಕಕ್ಕೆ ರೂಪಾಂತರಿಸಿದವರು ನಟ, ನಿರ್ದೇಶಕ ಶ್ರೀನಿವಾಸ ಪ್ರಭು. ನಾಟಕದ ನಿರ್ದೇಶನ ವಹಿಸಿದವರು ಕೆ. ಶ್ರೀನಿವಾಸ್ ಮೇಷ್ಟ್ರು. ಸುಮಾರು ಒಂದೂವರೆ ಗಂಟೆಯ ಅವಧಿಯ ಈ ನಾಟಕ ನಮ್ಮ ಪ್ರಜಾಪ್ರಭುತ್ವದ ರಾಜ್ಯದಲ್ಲಿ ಪೋಲಿಸ್ ಖಾತೆಯಲ್ಲಿ ಬೇರೂರಿರುವ ಭ್ರಷ್ಟಾಚಾರ ಮತ್ತು ಲಂಚ ಕೋರತನದ ಒಂದು ಮನಕಲಕುವ ಚಿತ್ರಣ. ಅದರಲ್ಲೂ ಭಾರತದ ಹಳ್ಳಿಗಳಲ್ಲಿ ಅವಿದ್ಯಾವಂತರು, ಬಡ ಕಷ್ಟಾಳುಗಳು ಹೆಚ್ಚಾಗಿರುವಂಥ ಸನ್ನಿವೇಶದಲ್ಲಿ, ಖಾಕಿ ಬಟ್ಟೆ ಹಾಕಿಕೊಂಡವರನ್ನು ದೇವರೆಂದು ಪೂಜಿಸುವವರು ಇರುವಂಥಲ್ಲಿ ಪೋಲಿಸರದೇ ರಾಜ್ಯಭಾರ. ಅವರ ದಬ್ಬಾಳಿಕೆಗೆ, ಅವರ ಅತಿ ದುರಾಸೆಗೆ ಯಾರ ಅಂಕೆಯೂ ಇಲ್ಲ, ಭಯವೂ ಇಲ್ಲ. ಇವರ ಹಿಡಿತಕ್ಕೆ ಸಿಕ್ಕ ಒಂದು ತುಂಬಿದ ಸಂಸಾರ ಧೂಳಿಪಟವಾಗುವುದು, ಎರಡು ಅಮಾಯಕ ಜೀವಗಳು ಸಾವನಪ್ಪುವುದು ಈ ನಾಟಕದ ಕಥಾ ವಸ್ತು.



*ಬೇಲಿ ಮತ್ತು ಹೊಲ ನಾಟಕದ ಎರಡು ದೃಶ್ಯಗಳು*

ನಾಗನಾಥಪುರ ಲಲಿತಕಲಾ ಸಂಘವು ಸುಮಾರು ೮ ವರ್ಷದಿಂದ ವಾರ್ಷಿಕ ನಾಟಕ ಸ್ಪರ್ಧೆಗಳು ಹಾಗೂ ರಂಗ ಪ್ರಯೋಗಗಳನ್ನು ನಡೆಸಿಕೊಂಡು ಬಂದಿದೆ. ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು. ಉದ್ಯೋಗಿಗಳಿಗೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಉತ್ತಮ ವೇದಿಕೆ ಒದಗಿಸಿದೆ. ಇದರ ಫಲವಾಗಿ ಹಲವಾರು ಕಲಾವಿದರು ಹೆಸರಾಂತ ತಂಡಗಳಲ್ಲಿ ಅಭಿನಯಿಸುವ ಅವಕಾಶವನ್ನು ಪಡೆದಿರುತ್ತಾರೆ. ಈ ನಾಟಕಕ್ಕೆ ಈ ವರ್ಷದ ಅತ್ಯುತ್ತಮ ಸರಣಿ ನಾಟಕವೆಂದು ಪ್ರಶಸ್ತಿ ದೊರಕಿದೆ.

ಕೆಲವು ಕಡೆ ಶೀರ ಶಾಬ್ದಿಕ ಸಂಭಾಷಣೆ ಅನ್ನಿಸಿದರೂ ಎಲ್ಲಾ ಪಾತ್ರಗಳು ಬಹಳ ಲವಲವಿಕೆಯಿಂದ ನಟಿಸಿದರು. ಹಿನ್ನೆಲೆ ಗಾಯನ ಹೆಚ್ಚಿನ ಪರಿಣಾಮ ವನ್ನೇನು ಬೀರುವಂತೆ ಕಾಣಲಿಲ್ಲ. ರಂಗ ಸಜ್ಜಿಕೆ ಉತ್ತಮ ವಾಗಿತ್ತು. ಒಟ್ಟಿನಲ್ಲಿ ಒಂದು ಉತ್ತಮ ಪ್ರಯೋಗ. ಇನ್ನಷ್ಟು ಪರಿಶ್ರಮದಿಂದ ಹೆಚ್ಚಿನ ಯಶಸ್ಸನ್ನು ಪಡೆಯುವಲ್ಲಿ ಸಫಲರಾಗುವಲ್ಲಿ ಸಂಶಯವಿಲ್ಲ. ರಜಾದಿನವಾದರೂ ಸಾಕಷ್ಟು ಸಂಖ್ಯೆಯಲ್ಲಿ ಸಭಿಕರು ಸೇರಿದ್ದು ಒಂದು ಸಂತೋಷಕರ ವಿಷಯ. •

# ಸೌಂದರ್ಯ ಲಯ

ಡಿಸೆಂಬರ್ ತಿಂಗಳ 24ರಂದು ಶನಿವಾರ ಮೈಸೂರು ಅಸೋಸಿಯೇಶನ್‌ನಲ್ಲಿ ನಿರ್ದೇಶಕ ಶ್ರೀ ಶಂಕರ್‌ನಾರಾಯಣ ಮತ್ತು ಶ್ರೀ ಅನಂತರಾಮನ್ ಅವರ ನೇತೃತ್ವದಲ್ಲಿ ಸೌಂದರ್ಯ ಲಯ ಎಂಬ ತಾಳವಾದ್ಯ ಕಚೇರಿಯನ್ನು ಏರ್ಪಡಿಸಲಾಗಿತ್ತು. ಸ್ವರ ಮಾಧುರ್ಯ ಮತ್ತು ತಾಳ ಬದ್ಧತೆಯ ಸುಂದರ ಸಂಯೋಜನೆಯ ಕಾರ್ಯಕ್ರಮ ಚೆನ್ನಾಗಿ ಮೂಡಿ ಬಂತು. ಆರಂಭದಲ್ಲಿ ವಾಡಿಕೆಯಂತೆ 'ವಾತಾಪಿ ಗಣಪತಿಂ....' ಎಂಬ ದೀಕ್ಷಿತರ ಕೃತಿಯನ್ನು ನುಡಿಸಿದರು. ನಂತರ 'ಅಲ್‌ಬೇಲ ಸಜನ್ ಆಯೋರೆ' ಎಂಬ ಕೃತಿ. ಈ ಕೃತಿಯಲ್ಲಿ ಹಿಂದೂಸ್ತಾನಿ, ಕರ್ನಾಟಕ ಮತ್ತು ಪಾಶ್ಚಿಮಾತ್ಯ ಸಂಗೀತದ ಶೈಲಿಗಳನ್ನು ಅಳವಡಿಸಿದ್ದರು. ಕೃತಿಯು ಹಿಂದೂಸ್ತಾನಿಯಲ್ಲಿ 'ಅಹಿರ್‌ಭೈರವ್' ರಾಗ ಮತ್ತು ಕರ್ನಾಟಕದಲ್ಲಿ 'ಚಕ್ರವಾಕ' ರಾಗದಲ್ಲಿತ್ತು. 'ನೀಲಾಂಬರಿ' ರಾಗದಲ್ಲಿ ಲಾಲಿ ಪದವನ್ನು ನುಡಿಸಿದರು. ನಂತರ ಒಂದು ಪಾಶ್ಚಿಮಾತ್ಯ ನುಡಿ ಹಾಗೂ ಮಂಗಳ ಗೀತೆಯನ್ನು ನುಡಿಸಿದರು. ಈ ಕಾರ್ಯಕ್ರಮವನ್ನು ಶ್ರೀಮತಿ ಸುಮಿತ್ರಾ ರಮೇಶ್ ನಿರೂಪಿಸಿದರು. ಈ ಕಾರ್ಯಕ್ರಮದಲ್ಲಿ ಶ್ರೀ ಶಂಕರ್ ನಾರಾಯಣ್ - ಮೃದಂಗ, ಶ್ರೀ ಅನಂತ್‌ರಾಮನ್ - ಪಿಟೀಲು, ಶ್ರೀ ಧೀಮಂತ್ ವರ್ಮನ್ - ಸಿತಾರ್, ಶ್ರೀ ಪ್ರವೀಣ್ ಕರ್ಕರೆ - ತಬಲಾ, ಶ್ರೀ ಶ್ರೀರಾಮ್‌ಗೋಪಾಲ್‌ಕೃಷ್ಣನ್ - ಘಟ, ಶ್ರೀ ಗೋಪಾಲನ್ - ಮೂರ್ಸಿಂಗ್, ಶ್ರೀಮತಿ ಹೇಮಾ ಬಾಲಸುಬ್ರಹ್ಮಣ್ಯಂ -ಕೊಳಲು ಹಾಗೂ ಶ್ರೀ ರಮಣಿ ಅವರು ಸಂಗೀತವನ್ನು ನೀಡಿದರು. ಶ್ರೀ ಶಂಕರ್ ನಾರಾಯಣ್ ಅವರನ್ನು ತಂಡದ ಪರವಾಗಿ ಶ್ರೀ ವಸಂತ ಅವರು ಪುಷ್ಪಗುಚ್ಛ ನೀಡಿ ಸನ್ಮಾನಿಸಿದರು. •



MH/MR/ME/093/06-08
Date of Posting : 10-01-2006

# ಡಿ.ವಿ.ಜಿ. ಅವರ ದ್ವಾದಶ ಸೂತ್ರಗಳು

1) ಹಳೆ ಸೂರ್ಯ ಹಳೆಚಂದ್ರ, ಹಳೆ ಭೂಮಿ ಹಳೆ ನೀರು
ಹಳೆ ಹಿಮಾಚಲ ಗಂಗೆ ಹಳೆ ವಂಶ ಚರಿತೆ
ಹಳೆಯವಿವು ನೀನಿವರೊಳಾವುದನು ಕಳೆದೀಯೋ?
ಹಳದು ಹೊಸತರೊಳಿರದೆ? ಮಂಕುತಿಮ್ಮ

2) ಸ್ಮಿತವಿರಲಿ ವದನದಲಿ, ಕಿವಿಗೆ ಕೇಳಿಸದಿರಲಿ
ಹಿತವಿರಲಿ ವಚನದಲಿ, ಋತವ ಬಿಡದಿರಲಿ
ಮಿತವಿರಲಿ ಮನಸಿನುದ್ವೇಗದಲಿ, ಭೋಗದಲಿ
ಅತಿಬೇಡವೆಲ್ಲಿಯುಂ - ಮಂಕುತಿಮ್ಮ

3) ಒಮ್ಮೆ ಹೂದೋಟದಲಿ, ಒಮ್ಮೆ ಕೆಳೆಕೂಟದಲಿ
ಒಮ್ಮೆ ಸಂಗೀತದಲಿ, ಒಮ್ಮೆ ಶಾಸ್ತ್ರದಲಿ
ಒಮ್ಮೆ ಸಂಸಾರದಲಿ, ಮತ್ತೊಮ್ಮೆ ಮೌನದಲಿ
ಬ್ರಹ್ಮಾನುಭವಿಯಾಗೋ ಮಂಕುತಿಮ್ಮ

4) ನಗುನಗುವ ಕಣ್ಣಳಿಗೆ ಹೊಗೆಯನೂದಲು ಬೇಡ
ಜಗವ ಸುಡುಗಾಡೆನುವ ಕಟುತಪಸು ಬೇಡ
ಮಗುವು ತಾಯ್ತಂದೆ ಕಣ್ಮುಂದೆ ನಡೆವಂತೆನಡೆ
ಮಿಗೆ ಚಿಂತೆ ತಲೆ ಹರಟೆ - ಮಂಕುತಿಮ್ಮ

5) ಸದ್ದು ಮಾಡದೆ ನೀನು ಜಗಕೆ ಬಂದವನಲ್ಲ
ಒದ್ದಾಟ ಗುದ್ದಾಟ ಬಾಳೆಲ್ಲ ವಾಯ್ತು
ಗದ್ದಲ ಬಿಡಲು ಕಡೆದಿನವಾನುಮಾದೀತೆ?
ನಿದ್ದೆವೊಲು ಸಾವ ಪಡೆ ಮಂಕುತಿಮ್ಮ

6) ನೂರಾರು ಮತವಿಹುದು ಲೋಕದುದ್ಯಾನದಲಿ
ಆರಿಸಿಕೊ ನಿನ್ನ ರುಚಿಗೊಪ್ಪುವುದನದರೊಳ್
ಸಾರದಡುಗೆಯನೊಳವಿಚಾರ ದೊಲೆಯಲಿ ಮಾಡು
ಬೇರೆ ಮತಿ ಬೇರೆ ಮತ - ಮಂಕುತಿಮ್ಮ

7) ನಗುವುದು ಸಹಜ ಧರ್ಮ ನಗಿಸುವುದು ಪರಧರ್ಮ
ನಗುವ ಕೇಳುತ ನಗುವುದತಿಶಯದ ಧರ್ಮ
ನಗುವ ನಗಿಸುವ ನಗಿಸಿ ನಗುತ ಬಾಳುವ ವರವ
ಮಿಗೆ ನೀನು ಬೇಡಿಕೊಳೊ - ಮಂಕುತಿಮ್ಮ

8) ಹೊರಗೆ ಲೋಕಾಸಕ್ತಿ ಒಳಗೆ ಸಕಲವಿರಕ್ತಿ
ಹೊರಗೆ ಕಾರ್ಯಧ್ಯಾನವೊಳಗುದಾಸೀನ
ಹೊರಗೆ ಸಂಸ್ಕೃತಿಭಾರವೊಳಗದರ ತಾತ್ಸಾರ
ವರಯೋಗಮಾರ್ಗವಿದು ಮಂಕುತಿಮ್ಮ

9) ಎರಡು ಕೋಣೆಗಳ ನೀಂ ಮಾಡು ಮನದಾಲಯದಿ
ಹೊರ ಕೋಣೆಯಲಿ ಲೋಗರಾಟಗಳನಾಡು
ವಿರಮಿಸೊಬ್ಬನೆ ಮೌನದೊಳಮನೆಯ ಶಾಂತಿಯಲಿ
ವರಯೋಗ ಸೂತ್ರವಿದು - ಮಂಕುತಿಮ್ಮ

10) ಹೊಸ ಚಿಗುರು ಹಳೆ ಬೇರು ಕೂಡಿರಲು ಮರಸೊಬಗು
ಹೊಸಯುಕ್ತಿ ಹಳೆ ತತ್ತ್ವದೊಡಗೂಡೆ ಧರ್ಮ
ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ
ಜಸವು ಜನ ಜೀವನಕೆ ಮಂಕುತಿಮ್ಮ

11) ಮರಣದಿಂ ಮುಂದೇನು? ಪ್ರೇತವೋ? ಭೂತವೋ?
ಪರಲೋಕವೊ ಪುನರ್ಜನ್ಮವೊ ಅದೇನೋ
ತಿರುಗಿ ಬಂದವರಿಲ್ಲ ವರದಿ ತಂದವರಿಲ್ಲ
ಧರೆಯ ಬಾಳ್ಗದರಿನೇಂ? - ಮಂಕುತಿಮ್ಮ

12) ಕಳವಳವ ನೀಗಿಬಿಡು, ತಳಮಳವ ದೂರವಿಡು
ಕಳೆ ತಳ್ಳು, ಗಲಭೆ ಗಾಬರಿಯ ಮನದಿಂದ
ಅಲೆದಾಡುತಿರೆ ದೀಪ ಕಣ್ಣೆ ಗುರಿತಪ್ಪುವುದು
ತಿಳಿ ತಿಳಿವು ಶಾಂತಿಯಲಿ - ಮಂಕುತಿಮ್ಮ

( ಮಂಕುತಿಮ್ಮನ ಕಗ್ಗದಿಂದ )

**ಡಿವಿಜಿ ವಿಶೇಷ ಸಂಚಿಕೆ**

ಮಾರ್ಗದರ್ಶನ : ಕೆ. ಮಂಜುನಾಥಯ್ಯ
ವಿನ್ಯಾಸ : ಡಾ. ಜಿ. ಎನ್. ಉಪಾಧ್ಯ
ಸಹಾಯ : ಚಂದ್ರಶೇಖರ ಬನ್ನಿಮಠ
ಭವಾನಿ
ರಾಜಶ್ರೀ ಇನಾಂದಾರ್
ಮೋಹನ್ ಬಿ.
ಮಧುಸೂದನ್

Edited, Printed & Published by M.A.N. Prasad, On behalf of the Mysore Association, Mumbai. Tel.: 2402 4647 ● Fax : 2401 0574
Email : karunadu@bom5.vsnl.net.in
Printed at Aarati Art Printers, Fort, Mumbai-400 001. * 2266 3361 / 2266 5938